# ಸೇವಾವಾಣಿ

ಆರ್ಬಿಟ್ ಸಂಸ್ಥೆ, ಹುಮನಾಬಾದ
ಮತ್ತು ಸೇವಾ ಸಂಗಮ ಸಂಸ್ಥೆ, ಕಲಬುರಗಿ



ನಮ್ಮ ತಂಡ • ನಮ್ಮ ಸೇವೆ • ನಮ್ಮ ಬದಲಾವಣೆ

## “ಜನರೊಂದಿಗೆ, ಜನರಿಗಾಗಿ ಸಮಾಜದ ಒಳಿತಿಗಾಗಿ ನಿರಂತರ ಸೇವೆ.”

**ಮಾಸಿಕ ಸುದ್ದಿಪತ್ರಿಕೆ | ಆಗಸ್ಟ್ 2026**



**ಪೂಜ್ಯ ರಾಬರ್ಟ್ ಮಿರಾಂದ**
ಧರ್ಮಾಧ್ಯಕ್ಷರು, ಗುಲ್ಬರ್ಗ ಧರ್ಮಕ್ಷೇತ್ರ
**ಅಧ್ಯಕ್ಷರು, ಆರ್ಬಿಟ್ ಸಂಸ್ಥೆ, ಹುಮನಾಬಾದ** ಮತ್ತು
**ಸೇವಾ ಸಂಗಮ ಸಂಸ್ಥೆ, ಕಲಬುರಗಿ**

# ಧರ್ಮಾಧ್ಯಕ್ಷರ ಸಂದೇಶ

ಪ್ರಿಯ ಓದುಗರೇ, ದಾನಿಗಳು, ಸಹಯೋಗಿಗಳು ಹಾಗೂ ಆತ್ಮೀಯ ಸಹೋದರ-ಸಹೋದರಿಯರೇ,

“ಸೇವಾ ವಾಣಿ” ಆಗಸ್ಟ್ 2026ರ ಸಂಚಿಕೆಗೆ ಹೃತ್ಪೂರ್ವಕ ಸ್ವಾಗತ.

ಸೇವೆ, ಸಹಕಾರ ಮತ್ತು ಸಮರ್ಪಣೆಯೊಂದಿಗೆ ಸಮಾಜದ ಒಳಿತಿಗಾಗಿ ಸಾಗುತ್ತಿರುವ ನಮ್ಮ ಪಯಣದಲ್ಲಿ, ಆಗಸ್ಟ್ ತಿಂಗಳ ಪ್ರಮುಖ ಚಟುವಟಿಕೆಗಳು, ಸಾಧನೆಗಳು ಮತ್ತು ಜನರ ಬದುಕಿನಲ್ಲಿ ಮೂಡಿದ ಸಕಾರಾತ್ಮಕ ಬದಲಾವಣೆಗಳನ್ನು ಈ ಸಂಚಿಕೆಯ ಮೂಲಕ ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇವೆ.

ಆರ್ಬಿಟ್ ಸಂಸ್ಥೆ ಮತ್ತು ಸೇವಾ ಸಂಗಮ ಸಂಸ್ಥೆಗಳ ಸೇವಾ ಕಾರ್ಯಗಳಿಗೆ ನಿರಂತರವಾಗಿ ಬೆಂಬಲ ನೀಡುತ್ತಿರುವ ಸಿಬ್ಬಂದಿ, ದಾನಿಗಳು, ಸಹಭಾಗಿತ್ವ ಸಂಸ್ಥೆಗಳು ಹಾಗೂ ಸಮುದಾಯದ ಎಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ನಮ್ಮ ಒಗ್ಗಟ್ಟಿನ ಪ್ರಯತ್ನಗಳು ಇನ್ನಷ್ಟು ಜನರ ಬದುಕಿನಲ್ಲಿ ಭರವಸೆ ಮತ್ತು ಬದಲಾವಣೆಯನ್ನು ತರಲಿ.

ಸರ್ವಶಕ್ತ ದೇವರ ಆಶೀರ್ವಾದ ನಿಮ್ಮೆಲ್ಲರ ಮೇಲಿರಲಿ.

ಸ್ನೇಹಪೂರ್ವಕವಾಗಿ



**ಫಾ. ವಿಕ್ಟರ್ ವಾಸ್**
**ನಿರ್ದೇಶಕರು,** ಆರ್ಬಿಟ್ ಸಂಸ್ಥೆ, ಹುಮನಾಬಾದ ಮತ್ತು
ಸೇವಾ ಸಂಗಮ ಸಂಸ್ಥೆ, ಕಲಬುರಗಿ

# ನಿರ್ದೇಶಕರ ಸಂದೇಶ

ಪ್ರಿಯ ಓದುಗರೇ, ದಾನಿಗಳು, ಸಹಯೋಗಿಗಳು ಹಾಗೂ ಆತ್ಮೀಯರೇ,

“ಸೇವಾ ವಾಣಿ” ಆಗಸ್ಟ್ 2026ರ ಸಂಚಿಕೆಯನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಸಂತೋಷವಾಗುತ್ತಿದೆ. ಈ ಸಂಚಿಕೆಯಲ್ಲಿ ಆರ್ಬಿಟ್ ಮತ್ತು ಸೇವಾ ಸಂಗಮ ಸಂಸ್ಥೆಗಳ ಮೂಲಕ ನಡೆದ ಪ್ರಮುಖ ಸೇವಾ ಚಟುವಟಿಕೆಗಳು, ಸಮುದಾಯದೊಂದಿಗೆ ಬೆಸೆದುಕೊಂಡ ಕ್ಷಣಗಳು ಹಾಗೂ ನಮ್ಮ ಕಾರ್ಯಗಳ ಸಕಾರಾತ್ಮಕ ಪರಿಣಾಮಗಳನ್ನು ನಿಮ್ಮ ಮುಂದೆ ತರಲಾಗಿದೆ.

ನಮ್ಮ ಪ್ರತಿಯೊಂದು ಕಾರ್ಯದ ಹಿಂದಿರುವುದು ಸೇವೆಯ ಮನೋಭಾವ, ತಂಡದ ಪರಿಶ್ರಮ ಮತ್ತು ಸಮುದಾಯದ ಸಹಕಾರ. ಈ ಪಯಣದಲ್ಲಿ ನಮ್ಮೊಂದಿಗೆ ನಿಂತಿರುವ ಸಿಬ್ಬಂದಿ, ಸ್ವಯಂಸೇವಕರು, ದಾನಿಗಳು, ಸಹಭಾಗಿತ್ವ ಸಂಸ್ಥೆಗಳು ಹಾಗೂ ಎಲ್ಲಾ ಹಿತೈಷಿಗಳಿಗೆ ಹೃತ್ಪೂರ್ವಕ ಧನ್ಯವಾದಗಳು.

ನಿಮ್ಮ ಪ್ರೋತ್ಸಾಹವೇ ನಮ್ಮ ಸೇವಾ ಪಯಣಕ್ಕೆ ಮತ್ತಷ್ಟು ಶಕ್ತಿ.
ನಮ್ಮ ಸೇವೆ ಇನ್ನಷ್ಟು ಜನರ ಬದುಕಿನಲ್ಲಿ ಭರವಸೆ ಮತ್ತು ಬದಲಾವಣೆಯನ್ನು ತರಲಿ ಎಂಬ ಆಶಯದೊಂದಿಗೆ.

ಸ್ನೇಹಪೂರ್ವಕವಾಗಿ

# ಮಾನಸಿಕ ಅಸ್ವಸ್ಥರ ಸಮುದಾಯ ಆಧಾರಿತ ಕಾರ್ಯಕ್ರಮ

## ವಕಾಲತ್ತು ಮತ್ತು ಲಾಬಿ ಕಾರ್ಯಕ್ರಮ

03 ಆಗಸ್ಟ್ 2026ರಂದು, ಜನವಾಡ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ-LLLF ಕಾರ್ಯಕ್ರಮದ ವತಿಯಿಂದ ಡಿಎಮ್‌ಹೆಚ್‌ಪಿ ಶಿಬಿರದ ಸಂದರ್ಭದಲ್ಲಿ ವಕಾಲತ್ತು ಮತ್ತು ಲಾಬಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಔಷಧಿಗಳ ಕೊರತೆ ಹಾಗೂ ಆರೋಗ್ಯ ಸೇವೆಗಳಿಗೆ ಸಂಬಂಧಿಸಿದ ಸಮಸ್ಯೆಗಳ ಕುರಿತು 13 ಫಲಾನುಭವಿಗಳು ಆಡಳಿತ ವೈದ್ಯಾಧಿಕಾರಿಗಳೊಂದಿಗೆ ಚರ್ಚಿಸಿ, ಅಗತ್ಯ ಔಷಧಿಗಳು ನಿರಂತರವಾಗಿ ಲಭ್ಯವಾಗುವಂತೆ ಮನವಿ ಮಾಡಿದರು. ಫಲಾನುಭವಿಗಳ ಮನವಿಗೆ ಸ್ಪಂದಿಸಿದ ಅಧಿಕಾರಿಗಳು ಮುಂದಿನ ದಿನಗಳಲ್ಲಿ ಔಷಧಿಗಳ ಕೊರತೆಯಾಗದಂತೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಕಾರ್ಯಕ್ರಮವು ಫಲಾನುಭವಿಗಳ ಆರೋಗ್ಯ ಹಕ್ಕುಗಳು ಮತ್ತು ಅಗತ್ಯ ಸೇವೆಗಳ ಲಭ್ಯತೆಯನ್ನು ಖಚಿತಪಡಿಸುವ ನಿಟ್ಟಿನಲ್ಲಿ ಯಶಸ್ವಿಯಾಯಿತು.





03 ಆಗಸ್ಟ್ 2026ರಂದು, ಜನವಾಡ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ-LLLF ಕಾರ್ಯಕ್ರಮದ ವತಿಯಿಂದ ಆರೈಕೆದಾರರ ಸಭೆ ಹಮ್ಮಿಕೊಳ್ಳಲಾಯಿತು. ಆಪ್ತ ಸಮಾಲೋಚಕರಾದ ಶ್ರೀಮತಿ ರೂಪಾಲಿ ಅವರು ಫಲಾನುಭವಿಗಳ ಮಾನಸಿಕ ಆರೋಗ್ಯ, ನಿಯಮಿತ ಔಷಧ ಸೇವನೆ ಹಾಗೂ UDID ಕಾರ್ಡ್ ಪಡೆಯುವ ಕುರಿತು ಮಾಹಿತಿ ಮತ್ತು ಮಾರ್ಗದರ್ಶನ ನೀಡಿದರು. ಸಭೆಯಲ್ಲಿ 06 ಆರೈಕೆದಾರರು ಭಾಗವಹಿಸಿ, ಫಲಾನುಭವಿಗಳಿಗೆ ಅಗತ್ಯ ಬೆಂಬಲ ನೀಡುವ ಕುರಿತು ಚರ್ಚಿಸಿದರು. ಫಲಾನುಭವಿಗಳು ನಿಯಮಿತವಾಗಿ ಔಷಧ ಸೇವಿಸುವಂತೆ ನೋಡಿಕೊಳ್ಳಲು ಹಾಗೂ ಅರ್ಹರಿಗೆ UDID ಕಾರ್ಡ್ ಮಾಡಿಸಲು ಸಹಕರಿಸುವುದಾಗಿ ತಿಳಿಸಿದರು.



04 ಆಗಸ್ಟ್ 2026ರಂದು, ಆರ್ಬಿಟ್ ಸಂಸ್ಥೆ ಹಾಗೂ ಲಿವ್‌ಲವ್‌ಲಾಫ್ ಫೌಂಡೇಶನ್‌ನ ಸಂಯುಕ್ತ ಉಪಕ್ರಮದಡಿ ಬಸವಕಲ್ಯಾಣದ ಸರ್ಕಾರಿ ಆಸ್ಪತ್ರೆಯಲ್ಲಿ ಮನೋ-ಸಾಮಾಜಿಕ ಶಿಕ್ಷಣ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಆರ್ಬಿಟ್ ಸಂಸ್ಥೆಯ ಶ್ರೀಮತಿ ರೂಪಾಲಿ ಸಲ್ಗರ್ ಅವರು ಭಾಗವಹಿಸಿ, ಮಾನಸಿಕ ಆರೋಗ್ಯ, ಚೇತರಿಕೆ ಹಾಗೂ ಆರೋಗ್ಯಕರ ಜೀವನಶೈಲಿಗೆ ಸಂಬಂಧಿಸಿದ ವಿವಿಧ ವಿಷಯಗಳ ಕುರಿತು ಮಾಹಿತಿ ಮತ್ತು ಮಾರ್ಗದರ್ಶನ ನೀಡಿದರು. ಕಾರ್ಯಕ್ರಮದಲ್ಲಿ ಭಾವನೆಗಳ ಅರಿವು, ಯೋಗ ಮತ್ತು ಆರೋಗ್ಯ, ಕುಟುಂಬ ಹಾಗೂ ಸಮುದಾಯದ ಬೆಂಬಲ ಕುರಿತು ಚರ್ಚಿಸಲಾಯಿತು. ಕಾರ್ಯಕ್ರಮದ ಮೂಲಕ ಫಲಾನುಭವಿಗಳಿಗೆ ತಮ್ಮ ಭಾವನೆಗಳನ್ನು ಅರ್ಥಮಾಡಿಕೊಳ್ಳುವುದು, ದೈನಂದಿನ ಚಟುವಟಿಕೆಗಳನ್ನು ಸುಧಾರಿಸಿಕೊಳ್ಳುವುದು ಹಾಗೂ ನಿಯಮಿತ ಚಿಕಿತ್ಸೆಯನ್ನು ಪಡೆಯುವ ಮಹತ್ವದ ಕುರಿತು ಅರಿವು ಮೂಡಿಸಲಾಯಿತು. ಒಟ್ಟು 12 ಫಲಾನುಭವಿಗಳು ಭಾಗವಹಿಸಿ ಅಗತ್ಯ ಮಾಹಿತಿ ಮತ್ತು ಮಾರ್ಗದರ್ಶನವನ್ನು ಪಡೆದುಕೊಂಡರು. ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಿತು.

05 ಆಗಸ್ಟ್ 2026ರಂದು, ಔರಾದ್ ತಾಲೂಕಿನ ದುಡಕನಾಳ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಅಡಿಯಲ್ಲಿ ಪಾಲಕ-ಪೋಷಕರ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಸುನಿಲ್ ಅವರು ಭಾಗವಹಿಸಿ, ವಿವಿಧ ವಿಷಯಗಳ ಕುರಿತು ಮಾಹಿತಿ ನೀಡಿದರು. ಸಭೆಯು ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಶ್ರೀ ಆನಂದ್ ಅವರು ಪ್ರಾರ್ಥನೆ ನಡೆಸಿಕೊಟ್ಟರು ಹಾಗೂ ಶ್ರೀಮತಿ ಪೂಜಾ ಅವರು ಎಲ್ಲರನ್ನು ಸ್ವಾಗತಿಸಿದರು. ಸಭೆಯಲ್ಲಿ ಸರ್ಕಾರದ ವಿವಿಧ ಯೋಜನೆಗಳು ಹಾಗೂ ಸೌಲಭ್ಯಗಳು, ಗ್ರಾಮ ಪಂಚಾಯಿತಿಯಲ್ಲಿ ಲಭ್ಯವಿರುವ 5% ಅನುದಾನ ಮತ್ತು ಅದರ ಬಳಕೆ, ಸ್ವಾವಲಂಬನೆ, ಕಾನೂನುಬದ್ಧ ಹಕ್ಕುಗಳು, ಆರೋಗ್ಯದ ಕಾಳಜಿ, ದೈನಂದಿನ ಚಟುವಟಿಕೆಗಳು ಹಾಗೂ ತಮ್ಮ ಹಕ್ಕುಗಳನ್ನು ಪಡೆಯುವ ವಿಧಾನಗಳ ಕುರಿತು ಚರ್ಚಿಸಲಾಯಿತು. ಪಾಲಕ-ಪೋಷಕರಿಗೆ ಉಪಯುಕ್ತವಾಗುವ ಇನ್ನಿತರ ವಿಷಯಗಳ ಬಗ್ಗೆಯೂ ಮಾಹಿತಿ ನೀಡಲಾಯಿತು.
ಒಟ್ಟು 06 ಜನರು ಸಭೆಯಲ್ಲಿ ಭಾಗವಹಿಸಿ ಅಗತ್ಯ ಮಾಹಿತಿಯನ್ನು ಪಡೆದುಕೊಂಡರು. ಸಭೆಯ ಅಂತ್ಯದಲ್ಲಿ ಶ್ರೀ ಸುನಿಲ್ ಅವರು ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.



## ಪಾಲಕ-ಪೋಷಕರ ಸಭೆ





# ಟೈಲರಿಂಗ್

## ತರಬೇತಿ ಪಡೆದ ಫಲಾನುಭವಿಗಳಿಗೆ ಪ್ರಮಾಣಪತ್ರ ವಿತರಣೆ”

05 ಆಗಸ್ಟ್ 2026ರಂದು, ಭಾಲ್ಕಿ ತಾಲೂಕಿನ ಹಲ್ಬರ್ಗಾ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಲಿವ್ ಲವ್ ಲಾಫ್ ಫೌಂಡೇಶನ್‌ನ ಸಂಯುಕ್ತ ಆಶ್ರಯದಲ್ಲಿ ಟೈಲರಿಂಗ್ ತರಬೇತಿ ಪಡೆದ ಫಲಾನುಭವಿಗಳಿಗೆ ಪ್ರಮಾಣಪತ್ರ ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಅನುಗ್ರಹ ಚರ್ಚ್‌ನ ನಿರ್ದೇಶಕರಾದ ವಂದನೀಯ ಫಾದರ್ ಸತೀಶ್, ಹೊಲಿಗೆ ಯಂತ್ರ ತರಬೇತಿ ಶಿಕ್ಷಕಿಯಾದ ಶ್ರೀಮತಿ ರಾಜೇಶ್ವರಿ, ಆರ್ಬಿಟ್ ಸಂಸ್ಥೆಯ ಜಿಲ್ಲಾ ಮಟ್ಟದ ಕೌನ್ಸಿಲರ್ ಶ್ರೀಮತಿ ರೂಪಾಲಿ ಸಲ್ಗರ್, ಭಾಲ್ಕಿ ತಾಲೂಕಿನ ಮೇಲ್ವಿಚಾರಕರಾದ ಶ್ರೀ ಪ್ರಕಾಶ್ ಹಾಗೂ ಕಾರ್ಯಕರ್ತರಾದ ಶ್ರೀಮತಿ ರೇವಣಂಬಿಕ ಮತ್ತು ಶ್ರೀಮತಿ ಶಾವೂಬಾಯಿ ಅವರು ಭಾಗವಹಿಸಿದ್ದರು. ಮಾನಸಿಕ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಫಲಾನುಭವಿಗಳು ಚಿಕಿತ್ಸೆಯ ಮೂಲಕ ಚೇತರಿಸಿಕೊಂಡ ನಂತರ ಸ್ವಾವಲಂಬಿ ಜೀವನ ನಡೆಸಲು ಹಾಗೂ ತಮ್ಮ ಜೀವನೋಪಾಯವನ್ನು ಉತ್ತಮಪಡಿಸಿಕೊಳ್ಳಲು ಅಗತ್ಯ ಕೌಶಲ್ಯಗಳನ್ನು ಬೆಳೆಸುವುದು ಈ ತರಬೇತಿಯ ಮುಖ್ಯ ಉದ್ದೇಶವಾಗಿತ್ತು. ಫಲಾನುಭವಿಗಳು ಹಾಗೂ ಅವರ ಆರೈಕೆದಾರರ ಕುಟುಂಬಗಳನ್ನು ಸ್ವಾವಲಂಬಿಗಳನ್ನಾಗಿ ಮಾಡುವ ಮೂಲಕ ಅವರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪ್ರೋತ್ಸಾಹ ನೀಡುವುದು ಹಾಗೂ ಸೂಕ್ತ ಮಾರ್ಗದರ್ಶನ ಮತ್ತು ಅವಕಾಶಗಳನ್ನು ಒದಗಿಸುವುದು ಆರ್ಬಿಟ್ ಸಂಸ್ಥೆಯ ಪ್ರಮುಖ ಉದ್ದೇಶವಾಗಿದೆ. ಆರ್ಬಿಟ್ ಸಂಸ್ಥೆಯ ವತಿಯಿಂದ ಆಯೋಜಿಸಲಾದ ಟೈಲರಿಂಗ್ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಫಲಾನುಭವಿಗಳಿಗೆ ಕಾರ್ಯಕ್ರಮದಲ್ಲಿ ಪ್ರಮಾಣಪತ್ರಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಮಾತನಾಡಿದ ವಂದನೀಯ ಫಾದರ್ ಸತೀಶ್ ಅವರು, ಫಲಾನುಭವಿಗಳು ತರಬೇತಿಯ ಮೂಲಕ ಪಡೆದ ಕೌಶಲ್ಯವನ್ನು ಬಳಸಿಕೊಂಡು ವಿವಿಧ ರೀತಿಯ ಬಟ್ಟೆಗಳನ್ನು ಹೊಲಿದು ಆದಾಯ ಗಳಿಸಬೇಕು. ಆ ಆದಾಯವನ್ನು ಕುಟುಂಬದ ನಿರ್ವಹಣೆ, ಮಕ್ಕಳ ಶಿಕ್ಷಣ ಹಾಗೂ ಅವರ ಭವಿಷ್ಯದ ಅಭಿವೃದ್ಧಿಗೆ ಬಳಸಿಕೊಳ್ಳಬೇಕು ಎಂದು ತಿಳಿಸಿದರು. ಜೊತೆಗೆ, ಟೈಲರಿಂಗ್ ತರಬೇತಿಗೆ ಸಂಬಂಧಿಸಿದಂತೆ ಸರ್ಕಾರದಿಂದ ದೊರೆಯುವ ವಿವಿಧ ಯೋಜನೆಗಳು ಮತ್ತು ಸೌಲಭ್ಯಗಳನ್ನು ಪಡೆದುಕೊಂಡು ಜೀವನವನ್ನು ಇನ್ನಷ್ಟು ಉತ್ತಮವಾಗಿ ರೂಪಿಸಿಕೊಳ್ಳುವಂತೆ ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಟೈಲರಿಂಗ್ ತರಬೇತಿ ಪಡೆದ ಸುಮಾರು 15 ಫಲಾನುಭವಿಗಳು ಭಾಗವಹಿಸಿದ್ದರು. ಕಾರ್ಯಕ್ರಮವು ಫಲಾನುಭವಿಗಳಿಗೆ ತಮ್ಮ ಕೌಶಲ್ಯವನ್ನು ಜೀವನೋಪಾಯವಾಗಿ ಪರಿವರ್ತಿಸಿಕೊಂಡು ಸ್ವಾವಲಂಬಿ ಜೀವನ ನಡೆಸಲು ಪ್ರೇರಣೆಯಾಯಿತು.



# “ಮಾನಸಿಕ ಆರೋಗ್ಯವೇ

## ಉತ್ತಮ ಜೀವನದ ಆಧಾರ”

05 ಆಗಸ್ಟ್ 2026ರಂದು ಆರ್ಬಿಟ್ ಸಂಸ್ಥೆ ಹಾಗೂ ಲಿವ್‌ಲವ್‌ಲಾಫ್ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಬಸವಕಲ್ಯಾಣದ ಪ್ರಾಥಮಿಕ ಸಮುದಾಯ ಆರೋಗ್ಯ ಕೇಂದ್ರ, ಸರ್ಕಾರಿ ಆಸ್ಪತ್ರೆಯಲ್ಲಿ ಮನೋ-ಸಾಮಾಜಿಕ ಶಿಕ್ಷಣ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ಕೌನ್ಸೆಲರ್ ಶ್ರೀಮತಿ ರೂಪಾಲಿ ಸಲ್ಗರ್ ಅವರು ಭಾಗವಹಿಸಿ, ಫಲಾನುಭವಿಗಳಿಗೆ ಅಗತ್ಯವಾದ ಮಾಹಿತಿ ಹಾಗೂ ಮಾರ್ಗದರ್ಶನವನ್ನು ನೀಡಿದರು. ತರಬೇತಿಯ ಉದ್ದೇಶ ಮಾನಸಿಕ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವ ಫಲಾನುಭವಿಗಳು ಚಿಕಿತ್ಸೆಯ ಮೂಲಕ ಚೇತರಿಸಿಕೊಂಡು, ಸಮಾಜದ ಮುಖ್ಯವಾಹಿನಿಯಲ್ಲಿ ಎಲ್ಲರೊಂದಿಗೆ ಬೆರೆತು ಉತ್ತಮ ಜೀವನ ನಡೆಸುವಂತೆ ಪ್ರೋತ್ಸಾಹಿಸುವುದು ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು. ಅದೇ ರೀತಿ, ಫಲಾನುಭವಿಗಳು ಹಾಗೂ ಅವರ ಕುಟುಂಬಗಳು ಸರ್ಕಾರದಿಂದ ದೊರೆಯುವ ವಿವಿಧ ಯೋಜನೆಗಳು ಮತ್ತು ಸೌಲಭ್ಯಗಳನ್ನು ಪಡೆದುಕೊಂಡು ಸಾಮಾಜಿಕ, ಆರ್ಥಿಕ ಹಾಗೂ ಆರೋಗ್ಯದ ದೃಷ್ಟಿಯಿಂದ ಸರ್ವತೋಮುಖ ಅಭಿವೃದ್ಧಿ ಹೊಂದಲು ಅಗತ್ಯವಾದ ಅರಿವು ಮತ್ತು ಮಾರ್ಗದರ್ಶನ ನೀಡಲಾಯಿತು. ಚರ್ಚಿಸಲಾದ ವಿಷಯಗಳು ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಹಾಗೂ ಭಾವನಾತ್ಮಕ ಕ್ಷೇಮ. ಭಾವನೆಗಳನ್ನು ಅರ್ಥಮಾಡಿಕೊಳ್ಳುವುದು ಹಾಗೂ ಅವು ದೈನಂದಿನ ಜೀವನದ ಮೇಲೆ ಬೀರುವ ಪರಿಣಾಮ. ದೈನಂದಿನ ಜೀವನ ಚಟುವಟಿಕೆಗಳು, ವೈಯಕ್ತಿಕ ಸ್ವಚ್ಛತೆ, ಸ್ವಯಂ ಆರೈಕೆ, ಸಮರ್ಪಕ ನಿದ್ರೆ ಹಾಗೂ ನಿಯಮಿತ ದಿನಚರಿಯ ಮಹತ್ವ. ವೈದ್ಯರ ಸಲಹೆಯಂತೆ ನಿಯಮಿತವಾಗಿ ಔಷಧಿಗಳನ್ನು ಸೇವಿಸುವ ಮಹತ್ವ. ಆಳವಾದ ಉಸಿರಾಟ, ವಿಶ್ರಾಂತಿ ವಿಧಾನಗಳು ಹಾಗೂ ಸಕಾರಾತ್ಮಕ ಚಿಂತನೆಯ ಮೂಲಕ ಒತ್ತಡವನ್ನು ನಿರ್ವಹಿಸುವ ವಿಧಾನಗಳು. ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಉತ್ತಮವಾಗಿರಿಸಿಕೊಳ್ಳಲು ಯೋಗ ಹಾಗೂ ಸರಳ ವ್ಯಾಯಾಮಗಳ ವಿಷಯಗಳ ಕುರಿತು ಮಾಹಿತಿ ಹಾಗೂ ಪ್ರಾಯೋಗಿಕ ಮಾರ್ಗದರ್ಶನ ನೀಡುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 10 ಜನ ಫಲಾನುಭವಿಗಳು ಭಾಗವಹಿಸಿ ಅಗತ್ಯ ಮಾಹಿತಿಯನ್ನು ಪಡೆದುಕೊಂಡರು.

## 03 ಆರ್ಬಿಟ್ ಸಂಸ್ಥೆ, ಹುಮನಾಬಾದ

06 ಆಗಸ್ಟ್ 2026ರಂದು, ಬಸವಕಲ್ಯಾಣ ತಾಲೂಕಿನ ರಾಜೇಶ್ವರ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ-ಲಿವ್‌ಲವ್‌ಲಾಫ್ ಫೌಂಡೇಶನ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ಆರೈಕೆದಾರರ ಸಭೆ ಆಯೋಜಿಸಲಾಯಿತು. ಸರ್ಕಾರದ ವಿವಿಧ ಯೋಜನೆಗಳು, ಜಾಬ್ ಕಾರ್ಡ್, UDID ಕಾರ್ಡ್ ಹಾಗೂ ಗ್ರಾಮ ಪಂಚಾಯಿತಿಯಿಂದ ದೊರೆಯುವ ಸೌಲಭ್ಯಗಳ ಕುರಿತು ಮಾಹಿತಿ ನೀಡಲಾಯಿತು. ಕ್ಷೇತ್ರ ಮೇಲ್ವಿಚಾರಕರಾದ ಶ್ರೀ ವಿಜಯಕುಮಾರ್ ಅವರು ನಿಯಮಿತ ಔಷಧ ಸೇವನೆ, ವ್ಯಾಯಾಮ, ಯೋಗ ಮತ್ತು ಧ್ಯಾನದ ಮಹತ್ವವನ್ನು ತಿಳಿಸಿದರು. ಒಟ್ಟು 09 ಜನರು ಭಾಗವಹಿಸಿ ಅಗತ್ಯ ಮಾಹಿತಿ ಪಡೆದುಕೊಂಡರು. ಸಭೆಯು ಯಶಸ್ವಿಯಾಗಿ ನಡೆಯಿತು.





12 ಆಗಸ್ಟ್ 2026ರಂದು, ಕಮಲನಗರ ತಾಲೂಕಿನ ತೋರ್ಣವಾಡಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ-ಲಿವ್‌ಲವ್‌ಲಾಫ್ ಫೌಂಡೇಶನ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ಆರೈಕೆದಾರರ ಸಭೆ ಆಯೋಜಿಸಲಾಯಿತು. ಫಲಾನುಭವಿಗಳು ನಿಯಮಿತವಾಗಿ ಔಷಧ ಸೇವಿಸುವಂತೆ ಪ್ರೇರೇಪಿಸುವುದು ಹಾಗೂ ಸರ್ಕಾರದ ವಿವಿಧ ಯೋಜನೆಗಳು ಮತ್ತು ಸೌಲಭ್ಯಗಳ ಕುರಿತು ಮಾಹಿತಿ ನೀಡುವುದು ಸಭೆಯ ಉದ್ದೇಶವಾಗಿತ್ತು. ಎಲ್‌ಎಲ್‌ಎಲ್‌ಎಫ್ ಕಾರ್ಯಕ್ರಮದ ಆಪ್ತ ಸಮಾಲೋಚಕರಾದ ಶ್ರೀಮತಿ ರೂಪಾಲಿ ಅವರು ನಿಯಮಿತ ಔಷಧ ಸೇವನೆ, ಯೋಗ, ವ್ಯಾಯಾಮ ಹಾಗೂ ಮನೆಯಲ್ಲಿ ಸಣ್ಣಪುಟ್ಟ ಕೆಲಸಗಳಲ್ಲಿ ತೊಡಗಿಸಿಕೊಳ್ಳುವ ಮಹತ್ವವನ್ನು ತಿಳಿಸಿದರು. ಜಾಬ್ ಕಾರ್ಡ್, UDID ಕಾರ್ಡ್ ಹಾಗೂ ಪಿಂಚಣಿ ಸೌಲಭ್ಯಗಳ ಕುರಿತು ಮಾಹಿತಿ ಮತ್ತು ಮಾರ್ಗದರ್ಶನ ನೀಡಲಾಯಿತು.

13 ಆಗಸ್ಟ್ 2026ರಂದು, ಬಸವಕಲ್ಯಾಣ ತಾಲೂಕಿನ ಕಿಟ್ಟಾ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ-ಲಿವ್‌ಲವ್‌ಲಾಫ್ ಫೌಂಡೇಶನ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ಬನಶಂಕರಿ ಆರೈಕೆದಾರರ ಸಭೆ ಆಯೋಜಿಸಲಾಯಿತು. ಫಲಾನುಭವಿಗಳು ನಿಯಮಿತವಾಗಿ ಔಷಧ ಸೇವಿಸುವಂತೆ ಪ್ರೇರೇಪಿಸುವುದು ಹಾಗೂ ಸರ್ಕಾರದ ವಿವಿಧ ಸೌಲಭ್ಯಗಳ ಕುರಿತು ಮಾಹಿತಿ ನೀಡುವುದು ಸಭೆಯ ಉದ್ದೇಶವಾಗಿತ್ತು. ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಮಹಾದೇವ ಅವರು ನಿಯಮಿತ ಔಷಧ ಸೇವನೆ, ಯೋಗ, ವ್ಯಾಯಾಮ ಹಾಗೂ ದೈನಂದಿನ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮಹತ್ವವನ್ನು ತಿಳಿಸಿದರು. ಸರ್ಕಾರದ ಸೌಲಭ್ಯಗಳನ್ನು ಪಡೆಯಲು ಅಗತ್ಯ ದಾಖಲೆಗಳನ್ನು ಮಾಡಿಸಿಕೊಳ್ಳುವ ಕುರಿತು ಮಾಹಿತಿ ನೀಡಲಾಯಿತು. ಫಲಾನುಭವಿಗಳಿಗೆ UDID ಕಾರ್ಡ್‌ಗೆ ಅರ್ಜಿ ಸಲ್ಲಿಸುವಂತೆ ಮಾರ್ಗದರ್ಶನ ನೀಡಲಾಯಿತು.





14 ಆಗಸ್ಟ್ 2026ರಂದು, ಔರಾದ್ ತಾಲೂಕಿನ ಸಂತಪುರ ಗ್ರಾಮದಲ್ಲಿ ತಾಲೂಕು ವಿಶೇಷ ಚೇತನರ ಗುಂಪಿನ ಸಭೆಯನ್ನು ಆಯೋಜಿಸಲಾಯಿತು. ವಿಶೇಷ ಚೇತನರು, ಕುಟುಂಬ ಸದಸ್ಯರು ಹಾಗೂ ಆರೈಕೆದಾರರು ಸೇರಿದಂತೆ ಒಟ್ಟು 26 ಜನರು ಭಾಗವಹಿಸಿದರು. ಸಭೆಯಲ್ಲಿ ವಿಶೇಷ ಚೇತನರ ಹಕ್ಕುಗಳು, ಪಿಂಚಣಿ, ಗುರುತಿನ ಚೀಟಿ, ಶಿಕ್ಷಣ, ಆರೋಗ್ಯ, ಉದ್ಯೋಗ ಹಾಗೂ ಸ್ವಾವಲಂಬನೆ ಕುರಿತು ಮಾಹಿತಿ ನೀಡಲಾಯಿತು. ಸಂಪನ್ಮೂಲ ವ್ಯಕ್ತಿಗಳಾದ ಆರ್ಬಿಟ್ ಸಂಸ್ಥೆ ಹಾಗೂ ಐಐಐಈನ ಸಂಯೋಜಕರಾದ ಶ್ರೀ ರಫೀಕ್ ಸರ್ ಅವರು ಸರ್ಕಾರದ ವಿವಿಧ ಸೌಲಭ್ಯಗಳನ್ನು ಪಡೆಯಲು ಅಗತ್ಯ ದಾಖಲೆಗಳು ಮತ್ತು ಅರ್ಜಿ ಸಲ್ಲಿಸುವ ವಿಧಾನಗಳ ಕುರಿತು ಮಾರ್ಗದರ್ಶನ ನೀಡಿದರು. ವಿಶೇಷ ಚೇತನರು ತಮ್ಮ ಹಕ್ಕುಗಳ ಬಗ್ಗೆ ಅರಿವು ಹೊಂದಿ ಸಮಾಜದ ಮುಖ್ಯವಾಹಿನಿಯಲ್ಲಿ ಗೌರವಯುತವಾಗಿ ಬದುಕಲು ಮುಂದಾಗಬೇಕು ಎಂದು ತಿಳಿಸಲಾಯಿತು.

# "ಮನಸ್ಸಿನ ಆರೈಕೆ, ಜೀವನದ ಸುಧಾರಣೆ"

*"Healing takes time, and asking for help is a courageous step."*

# 04 ಆರ್ಬಿಟ್ ಸಂಸ್ಥೆ, ಹುಮನಾಬಾದ

06 ಆಗಸ್ಟ್ 2026ರಂದು, ಬಸವಕಲ್ಯಾಣ ತಾಲೂಕಿನ ರಾಜೇಶ್ವರ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ-ಲಿವ್‌ಲವ್‌ಲಾಫ್ ಫೌಂಡೇಶನ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ಆರೈಕೆದಾರರ ಸಭೆ ಆಯೋಜಿಸಲಾಯಿತು. ಸರ್ಕಾರದ ವಿವಿಧ ಯೋಜನೆಗಳು, ಜಾಬ್ ಕಾರ್ಡ್, UDID ಕಾರ್ಡ್ ಹಾಗೂ ಗ್ರಾಮ ಪಂಚಾಯಿತಿಯಿಂದ ದೊರೆಯುವ ಸೌಲಭ್ಯಗಳ ಕುರಿತು ಮಾಹಿತಿ ನೀಡಲಾಯಿತು. ಕ್ಷೇತ್ರ ಮೇಲ್ವಿಚಾರಕರಾದ ಶ್ರೀ ವಿಜಯಕುಮಾರ್ ಅವರು ನಿಯಮಿತ ಔಷಧ ಸೇವನೆ, ವ್ಯಾಯಾಮ, ಯೋಗ ಮತ್ತು ಧ್ಯಾನದ ಮಹತ್ವವನ್ನು ತಿಳಿಸಿದರು. ಒಟ್ಟು 09 ಜನರು ಭಾಗವಹಿಸಿ ಅಗತ್ಯ ಮಾಹಿತಿ ಪಡೆದುಕೊಂಡರು. ಸಭೆಯು ಯಶಸ್ವಿಯಾಗಿ ನಡೆಯಿತು.





19 ಆಗಸ್ಟ್ 2026ರಂದು, ಬೀದರ್ ತಾಲೂಕಿನ ಜಿಲ್ಲಗಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ-ಲಿವ್‌ಲವ್‌ಲಾಫ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅರುಣ್ ಅವರು ಪಾಲಕ-ಪೋಷಕರ ಸಭೆ ನಡೆಸಿದರು. ಮಾನಸಿಕ ಆರೋಗ್ಯದ ಕಾಳಜಿ, ಫಲಾನುಭವಿಗಳಿಗೆ ಅಗತ್ಯ ಬೆಂಬಲ ಹಾಗೂ ಅವರ ಹಕ್ಕುಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. UDID ಕಾರ್ಡ್, ಮಾಸಿಕ ಪಿಂಚಣಿ ಹಾಗೂ ವೃದ್ಧಾಪ್ಯ ವೇತನ ಸೇರಿದಂತೆ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳ ಕುರಿತು ಮಾಹಿತಿ ನೀಡಲಾಯಿತು. ಫಲಾನುಭವಿಗಳೊಂದಿಗೆ ಅನುಭವಗಳನ್ನು ಹಂಚಿಕೊಂಡು, ಅವರ ಆರೋಗ್ಯವನ್ನು ಉತ್ತಮವಾಗಿ ಕಾಪಾಡಿಕೊಳ್ಳುವ ಕುರಿತು ಸಲಹೆ ನೀಡಲಾಯಿತು.

20 ಆಗಸ್ಟ್ 2026ರಂದು, ಬೀದರ್ ತಾಲೂಕಿನ ಸಿಕೇಂದ್ರಪುರ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ-ಲಿವ್‌ಲವ್‌ಲಾಫ್ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಭಾಗ್ಯವಂತಿ ಆರೈಕೆದಾರರ ಸಭೆ ನಡೆಸಲಾಯಿತು. ಮಾನಸಿಕ ಆರೋಗ್ಯ ಸಮಸ್ಯೆ ಹೊಂದಿರುವ ವ್ಯಕ್ತಿಗಳಿಗೆ ಸರ್ಕಾರದ ವಿವಿಧ ಸೌಲಭ್ಯಗಳನ್ನು ಪಡೆಯಲು ಪ್ರೇರೇಪಿಸುವುದು ಹಾಗೂ ವೈದ್ಯರ ಸಲಹೆಯಂತೆ ನಿಯಮಿತವಾಗಿ ಔಷಧಿ ಸೇವಿಸುವ ಕುರಿತು ಅರಿವು ಮೂಡಿಸುವುದು ಸಭೆಯ ಮುಖ್ಯ ಉದ್ದೇಶವಾಗಿತ್ತು. ಕಾರ್ಯಕ್ರಮದ ಕಾರ್ಯಕರ್ತರಾದ ಕುಮಾರಿ ಪಾರ್ವತಿ ಅವರು ನಿಯಮಿತ ಔಷಧಿ ಸೇವನೆ, ಯೋಗ ಮತ್ತು ವ್ಯಾಯಾಮ, ಪ್ರತಿದಿನ 7–9 ಗಂಟೆಗಳ ಸಮರ್ಪಕ ನಿದ್ರೆ ಹಾಗೂ ಮನೆಯ ಸಣ್ಣಪುಟ್ಟ ಕೆಲಸಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಮಹತ್ವವನ್ನು ವಿವರಿಸಿದರು. ಸಭೆಯಲ್ಲಿ ನೀಡಿದ ಸಲಹೆಗಳನ್ನು ಪಾಲಿಸುವುದಾಗಿ ಫಲಾನುಭವಿಗಳು ಭರವಸೆ ನೀಡಿದರು.





21 ಆಗಸ್ಟ್ 2026ರಂದು, ಬೀದರ್ ತಾಲೂಕಿನ ಸೇಕ್ರೆಡ್ ಹಾರ್ಟ್ ಚರ್ಚ್‌ನಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ-ಲಿವ್‌ಲವ್‌ಲಾಫ್ ಫೌಂಡೇಶನ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ತಾಲೂಕು ಮಟ್ಟದ ಒಕ್ಕೂಟ ಸಭೆ ಆಯೋಜಿಸಲಾಯಿತು. ಆರ್ಬಿಟ್ ಸಂಸ್ಥೆಯ ಆಪ್ತ ಸಮಾಲೋಚಕರಾದ ಶ್ರೀಮತಿ ರೂಪಾಲಿ ಅವರು ಮಾನಸಿಕ ಆರೋಗ್ಯ ಸಮಸ್ಯೆ ಹೊಂದಿರುವವರು ಎದುರಿಸುತ್ತಿರುವ ಸಮಸ್ಯೆಗಳು, ಅವರ ಹಕ್ಕುಗಳು ಹಾಗೂ ಸರ್ಕಾರಿ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು. ಫಲಾನುಭವಿಗಳ ಸಮಸ್ಯೆಗಳನ್ನು ಸಂಬಂಧಿತ ಅಧಿಕಾರಿಗಳ ಗಮನಕ್ಕೆ ತಂದು ಪರಿಹಾರಕ್ಕಾಗಿ ನಿರಂತರ ಅನುಸರಣೆ ಮಾಡುವುದು, ಯೋಗ, ಧ್ಯಾನ ಹಾಗೂ ಪುಸ್ತಕ ಓದುವಂತಹ ಚಟುವಟಿಕೆಗಳ ಮೂಲಕ ದೈಹಿಕ ಮತ್ತು ಭಾವನಾತ್ಮಕ ಆರೋಗ್ಯ ಕಾಪಾಡಿಕೊಳ್ಳುವುದು ಹಾಗೂ ಸಮಾಜದಲ್ಲಿನ ತಪ್ಪು ಕಲ್ಪನೆ ಮತ್ತು ತಾರತಮ್ಯವನ್ನು ಕಡಿಮೆ ಮಾಡುವ ಕುರಿತು ಚರ್ಚಿಸಲಾಯಿತು. ಸೇವೆ ಸಲ್ಲಿಸುವಾಗ ಸಕಾರಾತ್ಮಕ ಮನೋಭಾವ, ಸಹಾನುಭೂತಿ ಮತ್ತು ಮಾನವೀಯತೆ ಹೊಂದಿರಬೇಕು ಎಂದು ತಿಳಿಸಲಾಯಿತು.

20 ಆಗಸ್ಟ್ 2026ರಂದು, ಹುಮ್ನಾಬಾದ್ ನಗರದ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯ ಸಭಾಂಗಣದಲ್ಲಿ ಶ್ರೀ ವೀರಭದ್ರೇಶ್ವರ ತಾಲೂಕು ಒಕ್ಕೂಟದ ಸಭೆ ಆಯೋಜಿಸಲಾಯಿತು. ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ಕಾರ್ಯಕ್ರಮಗಳ ವ್ಯವಸ್ಥಾಪಕರಾದ ಸಿಸ್ಟರ್ ಸೋನಿಯಾ ಅವರು ಭಾಗವಹಿಸಿ, ಮಾನಸಿಕ ಆರೋಗ್ಯ ಸಮಸ್ಯೆ ಎದುರಿಸುತ್ತಿರುವವರು ಹಾಗೂ ಅವರ ಕುಟುಂಬಗಳಿಗೆ ಅಗತ್ಯ ಮಾಹಿತಿ, ಮಾರ್ಗದರ್ಶನ, ಬೆಂಬಲ ಮತ್ತು ಪುನರ್ವಸತಿ ಸೇವೆಗಳನ್ನು ಒದಗಿಸುವುದು ಒಕ್ಕೂಟದ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು. ಮಾನಸಿಕ ಅಸ್ವಸ್ಥರನ್ನು ಸಮಾಜದಿಂದ ದೂರವಿಡದೆ, ಅವರ ಹಕ್ಕು, ಗೌರವ ಮತ್ತು ಸಮಾನ ಅವಕಾಶಗಳನ್ನು ಕಾಪಾಡಿ ಸಮಾಜದ ಮುಖ್ಯವಾಹಿನಿಗೆ ತರಲು ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸಬೇಕು ಎಂದು ತಿಳಿಸಲಾಯಿತು. ಮಾನಸಿಕ ಆರೋಗ್ಯ ಜಾಗೃತಿ, ಸೂಕ್ತ ಚಿಕಿತ್ಸೆ ಮತ್ತು ಸಲಹೆ, ಕುಟುಂಬದ ಬೆಂಬಲ, ಪುನರ್ವಸತಿ, ಸ್ವಾವಲಂಬನೆ ಹಾಗೂ ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಸಹಾಯ ಮಾಡುವ ಕುರಿತು ಮಾಹಿತಿ ನೀಡಲಾಯಿತು.



# “ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ”

06 ಆಗಸ್ಟ್ 2026ರಂದು, ಹುಮ್ನಾಬಾದ್ ತಾಲೂಕಿನ ಚಂದನಳ್ಳಿ ಗ್ರಾಮದ ಉಪಕೇಂದ್ರದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಸೂರ್ಯಕಾಂತ್ ಅವರು ವಿಶ್ವ ಸ್ತನಪಾನ ಸಪ್ತಾಹದ ಕುರಿತು ಸಮುದಾಯದ 12 ಜನರಿಗೆ ಮಾಹಿತಿ ನೀಡಿದರು. ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಪ್ರತಿವರ್ಷ ಆಗಸ್ಟ್ 1ರಿಂದ 7ರವರೆಗೆ ಆಚರಿಸಲಾಗುವ ವಿಶ್ವ ಸ್ತನಪಾನ ಸಪ್ತಾಹದ ಉದ್ದೇಶ ತಾಯಿಯ ಎದೆಹಾಲಿನ ಮಹತ್ವದ ಕುರಿತು ಅರಿವು ಮೂಡಿಸುವುದಾಗಿದೆ. ತಾಯಿಯ ಎದೆಹಾಲು ಮಗುವಿಗೆ ಸಂಪೂರ್ಣ ಪೌಷ್ಟಿಕ ಆಹಾರವಾಗಿದ್ದು, ರೋಗನಿರೋಧಕ ಶಕ್ತಿ ಹೆಚ್ಚಿಸುವುದರ ಜೊತೆಗೆ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಸಹಕಾರಿಯಾಗಿದೆ ಎಂದು ತಿಳಿಸಲಾಯಿತು.







03 ಆಗಸ್ಟ್ 2026ರಂದು, ಹುಮ್ನಾಬಾದ್ ತಾಲೂಕಿನ ಕೋಳಿವಾಡ ಬಡಾವಣೆಯಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀಮತಿ ಕವಿತಾ ಅವರು ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಗುವಿನ ಮನೆಗೆ ಭೇಟಿ ನೀಡಿ ಮನೆ ಆಧಾರಿತ ಚಟುವಟಿಕೆಗಳನ್ನು ನಡೆಸಿದರು. ಮಗುವಿಗೆ ಸರಳ ಪದಗಳ ಉಚ್ಚಾರಣೆ, ಚಿತ್ರಗಳು ಹಾಗೂ ಸನ್ನೆಗಳ ಮೂಲಕ ಸಂವಹನ ಮತ್ತು ಪದಗಳನ್ನು ವಾಕ್ಯಗಳಲ್ಲಿ ಬಳಸುವ ಅಭ್ಯಾಸ ಮಾಡಿಸಲಾಯಿತು. ಚಿತ್ರ ಬಿಡಿಸುವುದು, A–Z ಅಕ್ಷರಗಳನ್ನು ಬರೆಯುವುದು ಮತ್ತು ಗುರುತಿಸುವುದು, ಮನೆಯ ವಸ್ತುಗಳ ಹೆಸರು ಹಾಗೂ 1ರಿಂದ 10ರವರೆಗೆ ಸಂಖ್ಯೆಗಳ ಪರಿಚಯ ಸೇರಿದಂತೆ ವಿವಿಧ ಚಟುವಟಿಕೆಗಳನ್ನು ಮಾಡಿಸಲಾಯಿತು. ಮಗುವಿನ ಮಾತು, ಸಂವಹನ ಮತ್ತು ಜ್ಞಾನಾತ್ಮಕ ಬೆಳವಣಿಗೆಗೆ ಪೋಷಕರು ನಿರಂತರವಾಗಿ ಸಹಕರಿಸುವಂತೆ ಸಲಹೆ ನೀಡಲಾಯಿತು.

# “ಮಹಿಳಾ ಸಬಲೀಕರಣ ಕಾರ್ಯಕ್ರಮ”

ಶ್ರೀಮತಿ ಜೈ ಶ್ರೀ ಗಂಡ ಸಂಜೇಕುಮಾರ್ ಅವರು ದಯಾಸಾಗರ ಸಂಘದ ಸದಸ್ಯರಾಗಿ ಕಳೆದ 25 ವರ್ಷಗಳಿಂದ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದು, ಪ್ರಸ್ತುತ ಮಹಾಸಂಘದ ಅಧ್ಯಕ್ಷರು ಹಾಗೂ ತಾಲೂಕು ಒಕ್ಕೂಟದ ಸದಸ್ಯರಾಗಿದ್ದಾರೆ. ಆರ್ಬಿಟ್ ಸಂಸ್ಥೆಯ ವಿವಿಧ ತರಬೇತಿಗಳು ಮತ್ತು ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮ ಜ್ಞಾನ, ಕೌಶಲ್ಯ ಹಾಗೂ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಂಡಿದ್ದಾರೆ. ತರಬೇತಿಗಳ ಮೂಲಕ ವಿವಿಧ ಸರ್ಕಾರಿ ಇಲಾಖೆಗಳೊಂದಿಗೆ ಉತ್ತಮ ಜಾಲಬಂಧ ಬೆಳೆಸಿಕೊಂಡಿರುವ ಅವರು, ಪ್ರಸ್ತುತ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಮೇಟಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ತಮ್ಮ ಸಂಘದ ಸುಮಾರು 100 ಸದಸ್ಯರು ಹಾಗೂ ಗ್ರಾಮಸ್ಥರಿಗೆ ಉದ್ಯೋಗಾವಕಾಶಗಳನ್ನು ದೊರಕಿಸಿಕೊಡಲು ಮುಂದಾಳತ್ವ ವಹಿಸುತ್ತಿದ್ದಾರೆ. ಜೊತೆಗೆ, ಗ್ರಾಮದ ಜನರ ಸಮಸ್ಯೆಗಳಿಗೆ ಸಲಹೆ, ಸಹಕಾರ ಮತ್ತು ಮಾರ್ಗದರ್ಶನ ನೀಡುತ್ತಿದ್ದಾರೆ.





20 ಆಗಸ್ಟ್ 2026ರಂದು ಆರ್ಬಿಟ್ ಸಂಸ್ಥೆ, ಹುಮ್ನಾಬಾದ್‌ನಲ್ಲಿ ಜನಜಾಗೃತಿ ತಾಲೂಕು ಒಕ್ಕೂಟದ ಸಭೆ ಆಯೋಜಿಸಲಾಯಿತು. ಸಭೆಯಲ್ಲಿ ಸಿಸ್ಟರ್ ಸೋನಿಯಾ ಅವರು ಮಹಿಳೆಯರ ನಾಯಕತ್ವ, ಧೈರ್ಯ ಹಾಗೂ ಸಾಮಾಜಿಕ ಚಟುವಟಿಕೆಗಳನ್ನು ಶ್ಲಾಘಿಸಿ, ಮಹಿಳೆಯರು ತಮ್ಮ ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡು ಮುಂಬರುವ ಚುನಾವಣೆಗಳಲ್ಲಿ ಧೈರ್ಯದಿಂದ ಸ್ಪರ್ಧಿಸಿ ಜವಾಬ್ದಾರಿಗಳನ್ನು ವಹಿಸಿಕೊಳ್ಳುವಂತೆ ಪ್ರೋತ್ಸಾಹಿಸಿದರು. ಗ್ರಾಮ ಮಟ್ಟದ ಸಂಘಗಳ ಸಭೆಗಳಲ್ಲಿ ಮಹಿಳಾ ನಾಯಕಿಯರು ಸಕ್ರಿಯವಾಗಿ ಭಾಗವಹಿಸಿ, ಚರ್ಚಿಸಲಾದ ವಿಷಯಗಳನ್ನು ಅರ್ಥಮಾಡಿಕೊಂಡು ಇತರ ಸದಸ್ಯರಿಗೂ ಮಾಹಿತಿ ನೀಡುವಂತೆ ತಿಳಿಸಲಾಯಿತು. ಸಭೆಯಲ್ಲಿ ಜನಶಕ್ತಿ ತಾಲೂಕು ಒಕ್ಕೂಟದ ಸದಸ್ಯರು ಹಾಗೂ ಮಹಿಳಾ ಸಬಲೀಕರಣ ಯೋಜನೆಯ ಹುಮ್ನಾಬಾದ್ ವಲಯದ ಸಿಬ್ಬಂದಿ ಭಾಗವಹಿಸಿದ್ದರು.

# 06 ಆರ್ಬಿಟ್ ಸಂಸ್ಥೆ, ಹುಮನಾಬಾದ



18 ಆಗಸ್ಟ್ 2026ರಂದು ಹುಮ್ನಾಬಾದ್‌ನ ಆರ್ಬಿಟ್ ಸಂಸ್ಥೆಯಲ್ಲಿ ಮಹಿಳಾ ಸಬಲೀಕರಣ ಯೋಜನೆಯ ವತಿಯಿಂದ ಸ್ಥಳೀಯ ಆಡಳಿತದಲ್ಲಿ ನಾಯಕತ್ವ ಕುರಿತು ತರಬೇತಿ ಕಾರ್ಯಾಗಾರ ನಡೆಯಿತು. ವಿವಿಧ ಒಕ್ಕೂಟಗಳಿಂದ ಆಗಮಿಸಿದ 40 ಮಹಿಳಾ ಪ್ರತಿನಿಧಿಗಳು ಭಾಗವಹಿಸಿದರು. ಕಾರ್ಯಕ್ರಮದಲ್ಲಿ ಶ್ರೀಮತಿ ನಿರ್ಮಲಾ ಅವರು ಸಂಸ್ಥೆಯ ಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು. ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ಅವರು ನಾಯಕತ್ವದ ಗುಣಗಳು, ಸ್ಥಳೀಯ ಸಮಸ್ಯೆಗಳನ್ನು ಗುರುತಿಸಿ ಪರಿಹರಿಸುವುದು ಹಾಗೂ ಸಮುದಾಯದೊಂದಿಗೆ ಉತ್ತಮ ಸಂಬಂಧ ಬೆಳೆಸುವ ಕುರಿತು ಮಾರ್ಗದರ್ಶನ ನೀಡಿದರು. ಮಹಿಳೆಯರು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ಮುಂಬರುವ ಗ್ರಾಮ ಪಂಚಾಯಿತಿ ಚುನಾವಣೆಗಳಲ್ಲಿ ಧೈರ್ಯದಿಂದ ಸ್ಪರ್ಧಿಸಿ ನಾಯಕತ್ವ ವಹಿಸಿಕೊಳ್ಳುವಂತೆ ಪ್ರೋತ್ಸಾಹಿಸಲಾಯಿತು. “ಸಂಘಟನೆಯಲ್ಲಿ ಬಲವಿದೆ” ಎಂಬ ಸಂದೇಶದೊಂದಿಗೆ ಒಗ್ಗಟ್ಟಿನಿಂದ ಸಮುದಾಯದ ಅಭಿವೃದ್ಧಿಗೆ ಶ್ರಮಿಸುವಂತೆ ತಿಳಿಸಲಾಯಿತು.




17 ಆಗಸ್ಟ್ 2026ರಂದು ಹುಮ್ನಾಬಾದ್ ತಾಲೂಕಿನ ಹಳ್ಳಿಕೇಡ ಗ್ರಾಮದಲ್ಲಿ ಮಹಿಳಾ ಸ್ವಸಹಾಯ ಸಂಘದ ಸದಸ್ಯರು ಹಾಗೂ ಸಮುದಾಯದ ಜನರಿಗೆ ಆರೋಗ್ಯದ ಕುರಿತು ತರಬೇತಿ ಆಯೋಜಿಸಲಾಯಿತು. ಶ್ರೀಮತಿ ಅಮಿತಾ ಅವರು ಆಯೋಜಿಸಿದ ತರಬೇತಿಯಲ್ಲಿ ಆಶಾ ಕಾರ್ಯಕರ್ತೆಯಾದ ಶ್ರೀಮತಿ ಶ್ರೀದೇವಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದರು. ತರಬೇತಿಯಲ್ಲಿ ಪೌಷ್ಟಿಕ ಆಹಾರ, ಸ್ವಚ್ಛತೆ, ನಿಯಮಿತ ವ್ಯಾಯಾಮ, ಉತ್ತಮ ನಿದ್ರೆ ಹಾಗೂ ಮಾನಸಿಕ ನೆಮ್ಮದಿಯ ಮಹತ್ವವನ್ನು ವಿವರಿಸಲಾಯಿತು. ಶುದ್ಧ ನೀರು ಕುಡಿಯುವುದು, ಕೈಗಳನ್ನು ಸ್ವಚ್ಛವಾಗಿ ತೊಳೆಯುವುದು, ಆಹಾರವನ್ನು ಮುಚ್ಚಿಡುವುದು ಹಾಗೂ ರೋಗಗಳು ಬಾರದಂತೆ ಮುನ್ನೆಚ್ಚರಿಕೆ ವಹಿಸುವ ಕುರಿತು ಅರಿವು ಮೂಡಿಸಲಾಯಿತು. ಮನೆಯ ಸುತ್ತಮುತ್ತ ತರಕಾರಿ, ಸೊಪ್ಪು ಮತ್ತು ಔಷಧೀಯ ಗಿಡಗಳನ್ನು ಬೆಳೆಸುವಂತೆ ಸಲಹೆ ನೀಡಲಾಯಿತು.

25 ಆಗಸ್ಟ್ 2026ರಂದು ಹುಮ್ನಾಬಾದ್ ತಾಲೂಕಿನ ಗಾಂಧಿನಗರ ಗ್ರಾಮದಲ್ಲಿ ಚಿಟಗುಪ್ಪ ಹಾಗೂ ಹುಮ್ನಾಬಾದ್ ತಾಲೂಕಿನ 6 ಗ್ರಾಮಗಳ ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರಿಗೆ ಸೌಹಾರ್ದ ಬ್ಯಾಂಕ್, ಸಂಘಗಳ ಬಲವರ್ಧನೆ ಹಾಗೂ ಮುಂಬರುವ ಚುನಾವಣೆ ಕುರಿತು ತರಬೇತಿ ಆಯೋಜಿಸಲಾಯಿತು. ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರಾದ ಶ್ರೀಮತಿ ಅಮಿತಾ ಅವರು ತರಬೇತಿಯನ್ನು ಆಯೋಜಿಸಿದ್ದು, ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ಅವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದರು. ತರಬೇತಿಯಲ್ಲಿ ಮಹಿಳೆಯರಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸುವುದು, ಆರ್ಥಿಕ ಹಾಗೂ ಸಾಮಾಜಿಕವಾಗಿ ಸಬಲರಾಗುವುದು ಮತ್ತು ಸಂಘಗಳನ್ನು ಬಲಪಡಿಸುವ ಕುರಿತು ಮಾರ್ಗದರ್ಶನ ನೀಡಲಾಯಿತು. “ನಿಮಗಾಗಿ ಮತ್ತು ನಿಮ್ಮಿಂದಲೇ ನಿರ್ಮಾಣವಾಗುವ ಸಂಸ್ಥೆಯೇ ಸೌಹಾರ್ದ ಬ್ಯಾಂಕ್” ಎಂಬ ಉದ್ದೇಶವನ್ನು ವಿವರಿಸಿ, ಮಹಿಳೆಯರ ಆರ್ಥಿಕ ಸಬಲೀಕರಣದಲ್ಲಿ ಅದರ ಮಹತ್ವವನ್ನು ತಿಳಿಸಲಾಯಿತು. ಮುಂಬರುವ ಚುನಾವಣೆಗಳಲ್ಲಿ ಮಹಿಳೆಯರು ಒಗ್ಗಟ್ಟಿನಿಂದ ಸಮರ್ಥ ನಾಯಕಿಯರನ್ನು ಆಯ್ಕೆ ಮಾಡಿ, ಸ್ಥಳೀಯ ಆಡಳಿತದಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಪ್ರೋತ್ಸಾಹಿಸಲಾಯಿತು. ಒಟ್ಟು 35 ಮಹಿಳೆಯರು ಭಾಗವಹಿಸಿ ಸೌಹಾರ್ದ ಬ್ಯಾಂಕ್, ಸಂಘಗಳ ಬಲವರ್ಧನೆ ಹಾಗೂ ಮಹಿಳಾ ನಾಯಕತ್ವದ ಕುರಿತು ಮಾಹಿತಿ ಮತ್ತು ಮಾರ್ಗದರ್ಶನ ಪಡೆದರು.





# 07 ಆರ್ಬಿಟ್ ಸಂಸ್ಥೆ, ಹುಮನಾಬಾದ

03 ಆಗಸ್ಟ್ 2026ರಂದು ಹನುಮಂತ್ ಕಾಲೋನಿಯಲ್ಲಿ ಅಕ್ಷರ ಸಂಘದ ಮಹಿಳಾ ಸದಸ್ಯರಿಗೆ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀಮತಿ ರೋಸ್ಮೇರಿ ಅವರು ಆರೋಗ್ಯದ ಕುರಿತು ತರಬೇತಿ ನೀಡಿದರು. ಸಾರ್ವಜನಿಕ ಮತ್ತು ಸಮುದಾಯ ಆರೋಗ್ಯ, ನೈರ್ಮಲ್ಯ, ಸ್ವಚ್ಛತೆ, ಪೌಷ್ಟಿಕ ಆಹಾರ ಹಾಗೂ ಸಾಂಕ್ರಾಮಿಕ ರೋಗಗಳ ನಿಯಂತ್ರಣ ಕುರಿತು ಮಾಹಿತಿ ನೀಡಲಾಯಿತು. ಕುಡಿಯುವ ನೀರಿನ ಶುಚಿತ್ವ, ವೈಯಕ್ತಿಕ ಹಾಗೂ ಪರಿಸರ ಸ್ವಚ್ಛತೆ, ಸಮತೋಲಿತ ಆಹಾರ ಮತ್ತು ಅಪೌಷ್ಟಿಕತೆ ತಡೆಗಟ್ಟುವ ಕುರಿತು ಅರಿವು ಮೂಡಿಸಲಾಯಿತು. ಡೆಂಗ್ಯೂ, ಮಲೇರಿಯಾ ಹಾಗೂ ಕೋವಿಡ್‌ನಂತಹ ಸಾಂಕ್ರಾಮಿಕ ರೋಗಗಳಿಂದ ರಕ್ಷಿಸಿಕೊಳ್ಳಲು ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಕುರಿತು ತಿಳಿಸಲಾಯಿತು. ಇದರ ಜೊತೆಗೆ ಗರ್ಭಿಣಿಯರ ಆರೈಕೆ ಹಾಗೂ ಹೆರಿಗೆ ಪೂರ್ವ ಮತ್ತು ಹೆರಿಗೆ ನಂತರದ ತಾಯಿ-ಮಗುವಿನ ಆರೈಕೆಯ ಮಹತ್ವವನ್ನು ವಿವರಿಸಲಾಯಿತು.



**"SERVICE FOR PEOPLE,**

*Change for Society!"*

# ಯಶೋಗಾಥೆ

## ಬದಲಾವಣೆಗೆ ದಾರಿ ತೋರಿದ ಹೆಜ್ಜೆಗಳು



## “ಹೊಸ ಜೀವನದತ್ತ ಪೂಜಾ ಅವರ ಪಯಣ”

ಔರಾದ್ ತಾಲೂಕಿನ ದುಡುಕನಾಳ ಗ್ರಾಮದ ಶ್ರೀಮತಿ ಪೂಜಾ, ತಂದೆ ಆನಂದ್, ಅವರು ಸುಮಾರು ಮೂರು ವರ್ಷಗಳಿಂದ ಮಾನಸಿಕ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದರು. ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಮೂಲಕ ನಿರಂತರವಾಗಿ ಮೂರು ವರ್ಷಗಳ ಕಾಲ ನಿಯಮಿತ ಚಿಕಿತ್ಸೆ ಹಾಗೂ ಅಗತ್ಯ ಮಾರ್ಗದರ್ಶನ ಪಡೆದು, ಪ್ರಸ್ತುತ ಸುಮಾರು 75% ರಷ್ಟು ಗುಣಮುಖರಾಗಿದ್ದಾರೆ. ಸಮಯಕ್ಕೆ ಸರಿಯಾಗಿ ಚಿಕಿತ್ಸೆ ದೊರಕುವಂತೆ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರು ನಿರಂತರ ಸಹಕಾರ ನೀಡಿದರು.

ಮಾನಸಿಕ ಆರೋಗ್ಯ ಸಮಸ್ಯೆಯಿಂದಾಗಿ ಸಮಾಜದ ಅಂಚಿಗೆ ತಳ್ಳಲ್ಪಟ್ಟಿದ್ದ ಕುಟುಂಬವನ್ನು ಮತ್ತೆ ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಸಂಸ್ಥೆಯು ಮಹತ್ವದ ಪಾತ್ರ ವಹಿಸಿದೆ. ಒಂದು ಕಾಲದಲ್ಲಿ ಅವಮಾನ ಮತ್ತು ಅಪಮಾನ ಎದುರಿಸುತ್ತಿದ್ದ ಕುಟುಂಬವು ಇಂದು ಸಮಾಜದಲ್ಲಿ ಗೌರವದಿಂದ ಬದುಕುವಂತಾಗಿದೆ. ಜೀವನವೇ ಮುಗಿದಂತೆ ಭಾಸವಾಗಿದ್ದ ಸಂದರ್ಭದಲ್ಲಿ ನವಜೀವನ ಕಾರ್ಯಕ್ರಮವು ಹೊಸ ಭರವಸೆ ಮತ್ತು ಹೊಸ ಆಶಾಕಿರಣ ನೀಡಿದೆ ಎಂದು ಪೂಜಾ ಅವರು ಸಂತೋಷ ವ್ಯಕ್ತಪಡಿಸಿದರು.

ತಮ್ಮ ಜೀವನದಲ್ಲಿ ಹೊಸ ಬದಲಾವಣೆ ಹಾಗೂ ಪುನರ್ಜೀವನದ ಅನುಭವ ನೀಡಿದ ಆರ್ಬಿಟ್ ಸಂಸ್ಥೆ ಮತ್ತು ನವಜೀವನ ಕಾರ್ಯಕ್ರಮಕ್ಕೆ ಅವರು ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸಿದರು.

**ಕಥೆಯ ಸಾರ:**

ಚಿಕಿತ್ಸೆ, ಬೆಂಬಲ ಮತ್ತು ಆತ್ಮವಿಶ್ವಾಸವು ಹೊಸ ಜೀವನಕ್ಕೆ ದಾರಿ ತೋರಿಸುತ್ತವೆ.

**Moral of the story:**

With proper treatment, support, and self-confidence, a new life is possible.

# ಯಶೋಗಾಥೆ

## ಬದಲಾವಣೆಗೆ ದಾರಿ ತೋರಿದ ಹೆಜ್ಜೆಗಳು



## “ಸ್ವಯಂ ಉದ್ಯೋಗದ ಮೂಲಕ ಸ್ವಾವಲಂಬನೆಯತ್ತ”

ಹುಮ್ನಾಬಾದ್ ತಾಲೂಕಿನ ಕಲ್ಲೂರು ಗ್ರಾಮದ ಫಲಾನುಭವಿಯಾದ ಶ್ರೀಮತಿ ವಸಂತ ಗಂಡ ಶ್ರೀಮಂತ ಅವರನ್ನು ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರು 2023ರಲ್ಲಿ ನಡೆಸಿದ ಸಮೀಕ್ಷೆಯ ಸಂದರ್ಭದಲ್ಲಿ ಗುರುತಿಸಿದರು. ಸುಮಾರು 8 ವರ್ಷಗಳಿಂದ ಮಾನಸಿಕ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಅವರಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಪ್ರೇರೇಪಿಸಿ, ವೈದ್ಯರ ಸಲಹೆಯಂತೆ ನಿಯಮಿತವಾಗಿ ಔಷಧಿಗಳನ್ನು ಸೇವಿಸುವಂತೆ ಮಾರ್ಗದರ್ಶನ ನೀಡಲಾಯಿತು. ಕಳೆದ ಮೂರು ವರ್ಷಗಳಿಂದ ನಿರಂತರ ಚಿಕಿತ್ಸೆ ಪಡೆದು, ಪ್ರಸ್ತುತ ಸುಮಾರು 75% ರಷ್ಟು ಚೇತರಿಸಿಕೊಂಡಿದ್ದಾರೆ.

ವಸಂತ ಅವರು ವಿಶೇಷಚೇತನರ ಸಂಘದ ಸದಸ್ಯರಾಗಿದ್ದು, ಸ್ವಾವಲಂಬಿ ಜೀವನ ನಡೆಸುವ ಆಸಕ್ತಿ ಹೊಂದಿದ್ದರು. ಇದನ್ನು ಗಮನಿಸಿದ ಆರ್ಬಿಟ್ ಸಂಸ್ಥೆಯು ಸ್ವಯಂ ಉದ್ಯೋಗಕ್ಕಾಗಿ ₹10,000 ಸಹಾಯಧನ ನೀಡಿತು. ಈ ನೆರವಿನಿಂದ ಹೊಲಿಗೆ ಯಂತ್ರವನ್ನು ಖರೀದಿಸಿ, ಮನೆಯಲ್ಲಿ ಬಟ್ಟೆ ಹೊಲಿಯುವ ಮೂಲಕ ದಿನಕ್ಕೆ ಸುಮಾರು ₹400 ಆದಾಯ ಗಳಿಸುತ್ತಿದ್ದಾರೆ.

ಈ ಸ್ವಯಂ ಉದ್ಯೋಗದಿಂದ ವಸಂತ ಅವರು ಕುಟುಂಬಕ್ಕೆ ಆರ್ಥಿಕವಾಗಿ ನೆರವಾಗುವುದರ ಜೊತೆಗೆ, ಆತ್ಮವಿಶ್ವಾಸದಿಂದ ಸ್ವಾವಲಂಬಿ ಜೀವನದತ್ತ ಹೆಜ್ಜೆ ಇಟ್ಟಿದ್ದಾರೆ. ತಮ್ಮ ಚೇತರಿಕೆ ಮತ್ತು ಜೀವನದಲ್ಲಿ ಹೊಸ ಬದಲಾವಣೆಗೆ ಸಹಕರಿಸಿದ ಆರ್ಬಿಟ್ ಸಂಸ್ಥೆ ಹಾಗೂ ಕಾರ್ಯಕರ್ತರಿಗೆ ಅವರು ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸಿದರು.

**ಕಥೆಯ ಸಾರ:**

ಚಿಕಿತ್ಸೆ, ಅವಕಾಶ ಮತ್ತು ಸ್ವಯಂ ಉದ್ಯೋಗದ ಬೆಂಬಲವು ಆತ್ಮವಿಶ್ವಾಸ ಹಾಗೂ ಸ್ವಾವಲಂಬನೆಯತ್ತ ದಾರಿ ತೋರಿಸುತ್ತದೆ.

**Moral of the story:**

Proper treatment, opportunity, and support for self-employment can lead to confidence and self-reliance.

# ಯಶೋಗಾಥೆ

## ಬದಲಾವಣೆಗೆ ದಾರಿ ತೋರಿದ ಹೆಜ್ಜೆಗಳು



## “ಮಗುವಿನ ಜೀವನದಲ್ಲಿ ಸಕಾರಾತ್ಮಕ ಬದಲಾವಣೆ ”

ಶ್ರೀನಿಧಿ, ಬೆಳಕೇರ ಗ್ರಾಮದ ನಿವಾಸಿ, ಲೋಕೋಮೋಟರ್ ವೈಕಲ್ಯ ಹೊಂದಿರುವ ಮಗುವಾಗಿದ್ದು, 09 ಡಿಸೆಂಬರ್ 2024ರಂದು ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಿಂದ ಗುರುತಿಸಲ್ಪಟ್ಟಳು. ಆರಂಭದಲ್ಲಿ ಕುಳಿತುಕೊಳ್ಳುವುದು, ವಸ್ತುಗಳನ್ನು ಹಿಡಿಯುವುದು, ಮಾತನಾಡುವುದು ಹಾಗೂ ದಿನನಿತ್ಯದ ಚಟುವಟಿಕೆಗಳನ್ನು ಸ್ವತಂತ್ರವಾಗಿ ಮಾಡಿಕೊಳ್ಳಲು ತೊಂದರೆ ಇತ್ತು.

ಮೌಲ್ಯಮಾಪನದ ಆಧಾರದ ಮೇಲೆ ಆರಂಭಿಕ ಉತ್ತೇಜನ ಮತ್ತು ಚಿಕಿತ್ಸಾತ್ಮಕ ಚಟುವಟಿಕೆಗಳನ್ನು ನೀಡಲಾಯಿತು. ಪೋಷಕರು ಕಾರ್ಯಕರ್ತರ ಮಾರ್ಗದರ್ಶನದಂತೆ ನಿಯಮಿತವಾಗಿ ಚಟುವಟಿಕೆಗಳನ್ನು ಮಾಡಿಸುತ್ತಾ ಸಹಕರಿಸಿದರು.

ನಿರಂತರ ಹಸ್ತಕ್ಷೇಪ ಮತ್ತು ಪೋಷಕರ ಸಹಕಾರದಿಂದ ಶ್ರೀನಿಧಿಯಲ್ಲಿ ಗಮನಾರ್ಹ ಪ್ರಗತಿ ಕಂಡುಬಂದಿದೆ. ಪ್ರಸ್ತುತ ಸ್ವತಂತ್ರವಾಗಿ ಓಡಾಡುವುದು, ವಸ್ತುಗಳನ್ನು ಹಿಡಿಯುವುದು, ಸರಳ ಪದಗಳನ್ನು ಮಾತನಾಡುವುದು, ಬಟ್ಟೆ ಧರಿಸುವುದು ಹಾಗೂ ಇತರ ಮಕ್ಕಳೊಂದಿಗೆ ಬೆರೆತು ಆಟವಾಡುವ ಸಾಮರ್ಥ್ಯವನ್ನು ಬೆಳೆಸಿಕೊಂಡಿದ್ದಾಳೆ. ಮಗುವಿಗೆ ಆಧಾರ್ ಕಾರ್ಡ್ ಹಾಗೂ ಪೌಷ್ಟಿಕ ಆಹಾರವನ್ನೂ ಒದಗಿಸಲಾಗಿದೆ.
ಮಗುವಿನ ಪ್ರಗತಿಯಿಂದ ಸಂತೋಷಗೊಂಡ ಪೋಷಕರು ಆರ್ಬಿಟ್ ಸಂಸ್ಥೆ ಹಾಗೂ ಎಪಿಡಿ ಸಂಸ್ಥೆಗೆ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸಿದರು.

**ಕಥೆಯ ಸಾರ:**

ನಿರಂತರ ಪ್ರಯತ್ನ, ಪೋಷಕರ ಸಹಕಾರ ಮತ್ತು ಸೂಕ್ತ ಮಾರ್ಗದರ್ಶನವು ಮಗುವಿನ ಬೆಳವಣಿಗೆಯಲ್ಲಿ ಸಕಾರಾತ್ಮಕ ಬದಲಾವಣೆ ತರಬಲ್ಲದು.

**Moral of the story:**

Continuous support, parental involvement, and proper guidance can bring positive changes in a child’s development.

# ಯಶೋಗಾಥೆ

## ಬದಲಾವಣೆಗೆ ದಾರಿ ತೋರಿದ ಹೆಜ್ಜೆಗಳು



## “ಮಾಹಿತಿ ಮತ್ತು ಮಾರ್ಗದರ್ಶನದಿಂದ ಬದಲಾವಣೆಯತ್ತ ”

ಶ್ರೀಮತಿ ಲಕ್ಷ್ಮಿ ಅವರು ಸೇವಂತಿಗೆ ಸಂಘದ ಸದಸ್ಯರಾಗಿ ಕಳೆದ ನಾಲ್ಕು ವರ್ಷಗಳಿಂದ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಆರ್ಬಿಟ್ ಸಂಸ್ಥೆಯ ನಾಯಕತ್ವ, ಪಂಚಾಯತ್ ರಾಜ್ ಹಾಗೂ ಸರ್ಕಾರಿ ಸೌಲಭ್ಯಗಳ ಕುರಿತ ವಿವಿಧ ತರಬೇತಿಗಳಲ್ಲಿ ಭಾಗವಹಿಸುವ ಮೂಲಕ ಧೈರ್ಯ, ಆತ್ಮವಿಶ್ವಾಸ ಮತ್ತು ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡಿದ್ದಾರೆ.

ತರಬೇತಿಗಳಿಂದ ಸ್ವಚ್ಛತೆ, ಪರಿಸರ ಸಂರಕ್ಷಣೆ ಹಾಗೂ ಶೌಚಾಲಯದ ಮಹತ್ವದ ಕುರಿತು ಅರಿವು ಪಡೆದ ಅವರು, ತಮ್ಮ ಮನೆಯಲ್ಲಿ ಶೌಚಾಲಯದ ಸೌಲಭ್ಯವಿಲ್ಲದಿರುವುದನ್ನು ಗಮನಿಸಿ ಗ್ರಾಮ ಪಂಚಾಯಿತಿಯನ್ನು ಸಂಪರ್ಕಿಸಿದರು. ಬಿಪಿಎಲ್ ಕಾರ್ಡ್ ಮೂಲಕ ಸರ್ಕಾರಿ ಸೌಲಭ್ಯ ಪಡೆದು ಶೌಚಾಲಯ ನಿರ್ಮಾಣಕ್ಕೆ ಕ್ರಮ ಕೈಗೊಂಡಿದ್ದು, ಪ್ರಸ್ತುತ ಕಾಮಗಾರಿ ನಡೆಯುತ್ತಿದೆ.

ಶ್ರೀಮತಿ ಲಕ್ಷ್ಮಿ ಅವರ ಅನಿಸಿಕೆ: “ಆರ್ಬಿಟ್ ಸಂಸ್ಥೆಯ ಮಾಹಿತಿ, ತರಬೇತಿ ಮತ್ತು ಮಾರ್ಗದರ್ಶನದಿಂದ ನನ್ನಲ್ಲಿ ಧೈರ್ಯ ಹಾಗೂ ಆತ್ಮವಿಶ್ವಾಸ ಹೆಚ್ಚಾಗಿದೆ. ಸರ್ಕಾರಿ ಸೌಲಭ್ಯಗಳನ್ನು ಪಡೆಯುವ ವಿಧಾನ ತಿಳಿದುಕೊಂಡು, ನನ್ನ ಮನೆಯಲ್ಲಿ ಶೌಚಾಲಯ ನಿರ್ಮಿಸಿಕೊಳ್ಳಲು ಸಾಧ್ಯವಾಗಿದೆ. ಆರ್ಬಿಟ್ ಸಂಸ್ಥೆಗೆ ಹೃತ್ಪೂರ್ವಕ ಧನ್ಯವಾದಗಳು.”

**ಕಥೆಯ ಸಾರ:**

ಅರಿವು ಮತ್ತು ಸರಿಯಾದ ಮಾರ್ಗದರ್ಶನವು ಹಕ್ಕುಗಳನ್ನು ಪಡೆಯಲು ಹಾಗೂ ಜೀವನದಲ್ಲಿ ಸಕಾರಾತ್ಮಕ ಬದಲಾವಣೆ ತರಲು ಸಹಾಯ ಮಾಡುತ್ತದೆ.

**Moral of the story:**

Awareness and proper guidance empower people to access their rights and bring positive change to their lives.

# ಯಶೋಗಾಥೆ

## ಬದಲಾವಣೆಗೆ ದಾರಿ ತೋರಿದ ಹೆಜ್ಜೆಗಳು



# “ಸರ್ಕಾರಿ ಸೌಲಭ್ಯದಿಂದ ಸ್ವಾವಲಂಬನೆಯತ್ತ”

ಹುಮ್ನಾಬಾದ್ ತಾಲೂಕಿನ ಕಪ್ಪರ್‌ಗಾಂವ್ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಮಹಿಳಾ ಸಬಲೀಕರಣ ಯೋಜನೆಯಡಿ ಗುಲಾಬಿ ಮಹಿಳಾ ಸ್ವಸಹಾಯ ಸಂಘ ರಚನೆಯಾಗಿದ್ದು, 10 ಸದಸ್ಯರು ಭಾಗವಾಗಿದ್ದಾರೆ. ಸದಸ್ಯರಿಗೆ ಉಳಿತಾಯ, ನಾಯಕತ್ವ, ಮಹಿಳೆಯರ ಪಾತ್ರ ಹಾಗೂ ಸರ್ಕಾರಿ ಸೌಲಭ್ಯಗಳ ಕುರಿತು ನಿರಂತರವಾಗಿ ತರಬೇತಿ ಮತ್ತು ಮಾರ್ಗದರ್ಶನ ನೀಡಲಾಗುತ್ತಿದೆ.

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಇಲಾಖೆಯ ಲೇಬರ್ ಕಾರ್ಡ್ ಕುರಿತು ಪಡೆದ ಮಾಹಿತಿಯ ಆಧಾರದ ಮೇಲೆ ಸಂಘದ ಸದಸ್ಯರಾದ ಶ್ರೀಮತಿ ಶ್ರೀದೇವಿ ಹಾಗೂ ಶ್ರೀಮತಿ ಸರಸ್ವತಿ ಅವರು ಹೊಲಿಗೆ ಯಂತ್ರಕ್ಕಾಗಿ ಅರ್ಜಿ ಸಲ್ಲಿಸಿದರು. ಇಬ್ಬರಿಗೂ ಹೊಲಿಗೆ ಯಂತ್ರ ದೊರೆತಿದ್ದು, ಸ್ವ ಉದ್ಯೋಗ ಆರಂಭಿಸಿ ಕುಟುಂಬದ ಆರ್ಥಿಕ ಅಭಿವೃದ್ಧಿಗೆ ನೆರವಾಗುತ್ತಿದ್ದಾರೆ.

ಶ್ರೀಮತಿ ಶ್ರೀದೇವಿ ಹಾಗೂ ಶ್ರೀಮತಿ ಸರಸ್ವತಿ ಅವರ ಅನಿಸಿಕೆ: “ಆರ್ಬಿಟ್ ಸಂಸ್ಥೆಯ ತರಬೇತಿ ಮತ್ತು ಮಾರ್ಗದರ್ಶನದಿಂದ ಸರ್ಕಾರಿ ಸೌಲಭ್ಯಗಳನ್ನು ಪಡೆಯುವ ವಿಧಾನ ತಿಳಿದುಕೊಂಡೆವು. ಹೊಲಿಗೆ ಯಂತ್ರ ಪಡೆದು ಸ್ವ ಉದ್ಯೋಗ ಆರಂಭಿಸಲು ಸಾಧ್ಯವಾಗಿದ್ದು, ನಮ್ಮ ಕುಟುಂಬದ ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾಗಿದೆ. ಆರ್ಬಿಟ್ ಸಂಸ್ಥೆಗೆ ಹೃತ್ಪೂರ್ವಕ ಧನ್ಯವಾದಗಳು.”

**ಕಥೆಯ ಸಾರ:**

ಅರಿವು, ಅವಕಾಶ ಮತ್ತು ಆತ್ಮವಿಶ್ವಾಸ ಒಂದಾದಾಗ, ಬದಲಾವಣೆ ಸ್ವಾವಲಂಬನೆಯಾಗಿ ರೂಪುಗೊಳ್ಳುತ್ತದೆ.

**Moral of the story:**

When awareness, opportunity, and confidence come together, change becomes self-reliance.

# ಪತ್ರಿಕಾ ವರದಿಗಳಲ್ಲಿ ನಮ್ಮ ಸೇವೆ

ಭ್ರಷ್ಟರ ಪಾಲಿಗೆ ಸಿಂಹ ಸ್ವಪ್ನ, ಜನರ ಪಾಲಿಗೆ ನ್ಯಾಯದ ಕಿರಣ.....
Reg No : KNKAN/26/A6108
JK ಕನ್ನಡ NEWS
ಜೆ.ಕೆ. ಸಂಪಾದಕತ್ವದಲ್ಲಿ.....
ಜಾಗೃತಿ ಕ್ರಾಂತಿ
ಕನ್ನಡ ದಿನ ಪತ್ರಿಕೆ
Cell : +91 8147127020
JAGRUTI KRANTI KANNADA NEWS PAPER
email : jkdaily108@gmail.com

## ಹುಮ್ನಾಬಾದ್: ಗ್ರಾಮೀಣ ಮಹಿಳೆಯರಲ್ಲಿ ಸ್ಥಳೀಯ ಆಡಳಿತ ನಾಯಕತ್ವ ಬೆಳೆಸಲು ತರಬೇತಿ



**ಹುಮ್ನಾಬಾದ್** : ಪಟ್ಟಣದ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯಲ್ಲಿ ಗುರುವಾರ ಗ್ರಾಮೀಣ ಭಾಗದ ಮಹಿಳೆಯರಿಗಾಗಿ "ಸ್ಥಳೀಯ ಆಡಳಿತದಲ್ಲಿ ನಾಯಕತ್ವ" ಕುರಿತ ಏಕದಿನ ತರಬೇತಿ ಕಾರ್ಯಾಗಾರ ನಡೆಯಿತು. ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ಅವರು ತರಬೇತಿಯನ್ನು ನಡೆಸಿಕೊಟ್ಟರು. ಒಕ್ಕೂಟಗಳಿಂದ ಆಗಮಿಸಿದ್ದ ಮಹಿಳೆಯರನ್ನು ಉದ್ದೇಶಿಸಿ ಮಾತನಾಡಿದ ಅವರು, ಉತ್ತಮ ನಾಯಕತ್ವಕ್ಕೆ ಇರಬೇಕಾದ ಗುಣಲಕ್ಷಣಗಳ ಬಗ್ಗೆ ವಿವರಿಸಿದರು. ನಾಯಕರಲ್ಲಿ ಇರಬೇಕಾದ ಗುಣಗಳು ಕಷ್ಟದಲ್ಲಿರುವವರನ್ನು ಗುರುತಿಸಿ ಸ್ಪಂದಿಸುವ ಮನೋಭಾವ, ಸಹಕಾರ, ಸಣ್ಣಪುಟ್ಟ ನಿರಂತರ ಸೇವೆ ಮತ್ತು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಮನಸ್ಸು ನಾಯಕರಿಗೆ ಅತ್ಯಗತ್ಯ ಎಂದು ಫಾದರ್ ವಿಕ್ಟರ್ ಹೇಳಿದರು. ಇತರರಿಂದ ಮೆಚ್ಚುಗೆ ಮತ್ತು ಗುರುತಿಸುವಿಕೆ ಪಡೆಯುವ ಕೆಲಸಗಳಲ್ಲಿ ತೊಡಗಬೇಕು. ಗುಂಪು ಸಂಘಟನೆ ಇಲ್ಲದೆ ಯಾವುದೇ ಬದಲಾವಣೆ ಸಾಧ್ಯವಿಲ್ಲ ಎಂದರು. ಸ್ವಸಹಾಯ ಸಂಘಗಳ ಮೂಲಕ ಮಹಿಳೆಯರು ಈಗಾಗಲೇ ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ. ಇದನ್ನು ಮೀರಿ ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲೂ ಮುನ್ನಡೆಯಬೇಕು. ಅದೇ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ ಎಂದು ಅವರು ತಿಳಿಸಿದರು. ಗ್ರಾ.ಪಂ. ಚುನಾವಣೆಯಲ್ಲಿ ಸ್ಪರ್ಧಿಸಿ ಮಹಿಳೆಯರು ಯಾವುದೇ ಕಾರಣಕ್ಕೂ ಹಿಂಜರಿಯದೆ ಎಲ್ಲಾ ಕ್ಷೇತ್ರಗಳಲ್ಲಿ ನಾಯಕರಾಗಿ ಬೆಳೆಯಬೇಕು. ತನ್ನ ಕುಟುಂಬ, ಸಮುದಾಯವನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು ಎಂದು ಕರೆ ನೀಡಿದರು.

ಮುಂಬರುವ ಗ್ರಾಮ ಪಂಚಾಯಿತಿ ಚುನಾವಣೆಗಳಲ್ಲಿ ಮಹಿಳೆಯರು ಸ್ಪರ್ಧಿಸಿ ಚುನಾಯಿತರಾಗಬೇಕು. ಗ್ರಾಮ ಮತ್ತು ಸಮುದಾಯದ ಸಣ್ಣಪುಟ್ಟ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಒಂದೊಂದಾಗಿ ಪರಿಹರಿಸುವಲ್ಲಿ ಅವರ ಶ್ರಮ ಅಮೋಘವಾಗಿರುತ್ತದೆ. ಆದ್ದರಿಂದ ಉತ್ತಮ ನಾಯಕರಾಗಿ ಬೆಳೆದು ಹಳ್ಳಿಯ ಏಳಿಗೆಗಾಗಿ ದುಡಿಯುವ ಗುಣಗಳನ್ನು ಅಳವಡಿಸಿಕೊಳ್ಳಬೇಕು.

ಉತ್ತಮ ನಾಯಕರನ್ನು ಆಯ್ಕೆ ಮಾಡಿ ಅವರಿಗೆ ಸಹಕರಿಸಬೇಕು. "ಸಂಘಟನೆಯಲ್ಲಿ ಬಲವಿದೆ" ಎಂಬುದನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಳ್ಳಬೇಕು ಎಂದು ಫಾದರ್ ವಿಕ್ಟರ್ ವಾಸ್ ಅವರು ಮಹಿಳೆಯರಿಗೆ ಕಿವಿಮಾತು ಹೇಳಿದರು. ಕಾರ್ಯಾಗಾರದಲ್ಲಿ ಸಂಸ್ಥೆಯ ಸಿಬ್ಬಂದಿ ಸಿಸ್ಟರ್ ಸೋನಿಯಾ, ಶ್ರೀಮತಿ ನಿರ್ಮಲಾ, ಸಿಸ್ಟರ್ ಯಡನ, ಶ್ರೀಮತಿ ಸವಿತಾ, ಅಮಿತಾ, ರೀಟಾ, ಸುಜಾತ, ಪ್ರಭು, ರೋಜ್ಮೆರಿ ಸೇರಿದಂತೆ 40 ಪ್ರತಿನಿಧಿಗಳು ಭಾಗವಹಿಸಿದ್ದರು.

Jagrutikranti
Aug 21, 2026 | Page 3
Powered by: WebOnline.in

## ಆರ್ಬಿಟ್ ಸಂಸ್ಥೆಯಿಂದ ಉಚಿತ ಟೈಲರಿಂಗ್ ತರಬೇತಿ



ಸಂಜೆ ಅಂತರಂಗ ಸುದ್ದಿ

ಬೀದರ ಆಗಸ್ಟ್ 06:ಮಹಿಳೆಯರ ಸ್ವಾವಲಂಬನೆ ಹಾಗೂ ಕೌಶಲ್ಯಾಭಿವೃದ್ಧಿಯನ್ನು ಉತ್ತೇಜಿಸುವ ಉದ್ದೇಶದಿಂದ ಆರ್ಬಿಟ್ ಸಂಸ್ಥೆಯ ವತಿಯಿಂದ ಹಲಬರ್ಗ ಗ್ರಾಮದಲ್ಲಿ ಉಚಿತ ಟೈಲರಿಂಗ್ ತರಬೇತಿ ಕಾರ್ಯಕ್ರಮ ಆರಂಭಿಸಲಾಯಿತು.

ಈ ತರಬೇತಿಯಲ್ಲಿ ಮಹಿಳೆಯರು ಮತ್ತು ಯುವತಿಯರಿಗೆ ಹೊಲಿಗೆ ಕಲೆ, ವಿವಿಧ ಮಾದರಿಯ ಉಡುಪುಗಳ ಹೊಲಿಗೆ, ಅಳತೆ ತೆಗೆದುಕೊಳ್ಳುವ ವಿಧಾನ ಹಾಗೂ ಯಂತ್ರದ ಬಳಕೆ ಸೇರಿದಂತೆ ಹಲವು ಕೌಶಲ್ಯಗಳನ್ನು ಪ್ರಾಯೋಗಿಕವಾಗಿ ಕಲಿಸಲಾಗುತ್ತಿದೆ.ಟೈಲರಿಂಗ್ ತರಬೇತಿಯ ಮುಗಿಸಿದವರಿಗೆ ತರಬೇತಿದಾರರಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಈ ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅನುಗ್ರಹದ ಚರ್ಚ್ ನ ನಿರ್ದೇಶಕರಾದ ವಂದನೆಯ ಫಾದರ್ ಸತೀಶ್ ಅವರು ಈ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು. ಈ ತರಬೇತಿಯ ಕುರಿತಾಗಿ ಫಲಾನುಭವಿಗಳು ತಮ್ಮ ಜೀವನವನ್ನು ಉತ್ತಮವಾಗಿ ರೂಪಿಸಿಕೊಳ್ಳಲು, ಕಲಿತಂತ ಕೌಶಲ್ಯದಿಂದ ವಿವಿಧ ರೀತಿಯ ಬಟ್ಟೆಗಳನ್ನು ಹೊಲಿದು ಅದರಿಂದ ಬಂದ ಹಣದಿಂದ ಕುಟುಂಬ ನಡೆಸಲು ಮತ್ತು ಮಕ್ಕಳ ಶಿಕ್ಷಣಕ್ಕಾಗಿ ಅವರ ಮುಂದಿನ ಭವಿಷ್ಯಕ್ಕಾಗಿ ಉಪಯೋಗಿಸಿಕೊಳ್ಳುವಂತೆ ಹಾಗೆಯೇ, ಈ ತರಬೇತಿಗೆ ಸಂಬಂಧಪಟ್ಟಂತಹ ಸರಕಾರದಿಂದ ಸಿಗುವಂತಹ ಸೌಲಭ್ಯಗಳನ್ನು ಪಡೆದುಕೊಂಡು ತಮ್ಮ ಸುಂದರವಾದ ಜೀವನವನ್ನು ಕಟ್ಟಿಕೊಳ್ಳುವಂತೆ ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ಆಪ್ತ ಸಮಾಲೋಚಕರಾದ ರೂಪಾಲಿ ಮತ್ತು ಭಾಲ್ಕಿ ತಾಲೂಕಿನ ಮೇಲ್ವಿಚಾರಕರಾದ ಪ್ರಕಾಶ್ ಸರ್ ಹಾಗೂ ಕಾರ್ಯಕರ್ತೆಯರಾದ ರೇವಣಾಂಬಿಕಾ, ಶಾಹೂಬಾಯಿ ಮತ್ತು ತರಬೇತಿ ಪಡೆದ ಫಲಾನುಭವಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಪತ್ರಿಕಾ ವರದಿಗಳಲ್ಲಿ ನಮ್ಮ ಸೇವೆ

RNI: KAR/KAN/83299 Contact: 9611766539 / 9620802670 / E-mail: ssp.kvpress@gmail.com
ಡಾ. ಎಸ್.ಎಸ್. ಪಾಟೀಲರ ಸಾರಥ್ಯದಲ್ಲಿ... ದ್ವೇಷ ಬಿಡು – ಪ್ರೀತಿ ಮಾಡು
ವಿಶ್ವ ದರ್ಶನ
VISHWA DARSHAN ಕನ್ನಡ ದಿನಪತ್ರಿಕೆ ವಿಶ್ವ ದರ್ಶನ
KANNADA DAILY NEWSPAPER
ವಿಶ್ವದ ಜೀವನಾಡಿ
ಏಕಕಾಲಕ್ಕೆ ಪ್ರಕಟ
Dr.S.S.Patil, Editor
ಹುಬ್ಬಳ್ಳಿ-ಧಾರವಾಡ, ಬೆಂಗಳೂರು, ಬೆಳಗಾವಿ, ಬಾಗಲಕೋಟೆ, ಹಾವೇರಿ, ಗದಗ, ಕಲಬುರಗಿ, ವಿಜಯಪುರ, ಬೀದರ, ಬಳ್ಳಾರಿ, ಕೊಪ್ಪಳ, ರಾಯಚೂರ, ಯಾದಗಿರ, ಚಿಕ್ಕಮಗಳೂರ, ಉತ್ತರ ಕನ್ನಡ, ಉಡುಪಿ, ಮಂಗಳೂರು, ಚಿತ್ರದುರ್ಗ, ದಾವಣಗೆರೆ.

## ಸ್ಥಳೀಯ ಆಡಳಿತದಲ್ಲಿ ಮಹಿಳೆಯರ ನಾಯಕತ್ವಕ್ಕೆ ಕರೆ




**ವಿಶ್ವ ದರ್ಶನ ಸುದ್ದಿ, ಹುಮನಾಬಾದ್:** ಸ್ಥಳೀಯ ಆಡಳಿತದಲ್ಲಿ ಮಹಿಳೆಯರು ಸಕ್ರಿಯವಾಗಿ ತೊಡಗಿಸಿಕೊಂಡು, ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಬೇಕು. ಮುಂಬರುವ ಗ್ರಾಮ ಪಂಚಾಯಿತಿ ಚುನಾವಣೆಗಳಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸ್ಪರ್ಧಿಸಿ ಚುನಾಯಿತರಾಗಿ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಆರ್ಬಿಟ್ ಸಂಸ್ಥೆಯ ನಿರ್ದೇಶಕ ಫಾದರ್ ವಿಕ್ಟರ್ ವಾಸ್ ಕರೆ ನೀಡಿದರು. ಪಟ್ಟಣದ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯಲ್ಲಿ 18ರಂದು ?ಸ್ಥಳೀಯ ಆಡಳಿತದಲ್ಲಿ ನಾಯಕತ್ವ? ಕುರಿತು ಗ್ರಾಮೀಣ ಪ್ರದೇಶದ ಮಹಿಳೆಯರಿಗಾಗಿ ತರಬೇತಿ ಕಾರ್ಯಾಗಾರ ನಡೆಯಿತು. ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ನಾಯಕತ್ವ ಎನ್ನುವುದು ಕೇವಲ ಅಧಿಕಾರ ಅಥವಾ ಹುದ್ದೆಗೆ ಸೀಮಿತವಾಗಿರದೆ, ಜನರ ಸಮಸ್ಯೆಗಳನ್ನು ಗುರುತಿಸಿ ಅವುಗಳಿಗೆ ಸ್ಪಂದಿಸುವ ಮನೋಭಾವ ಹೊಂದಿರುವುದಾಗಿದೆ ಎಂದು ಹೇಳಿದರು. ಮಹಿಳೆಯರು ತಮ್ಮ ಗ್ರಾಮ, ಸಮುದಾಯ ಹಾಗೂ ಸುತ್ತಮುತ್ತಲಿನ ಸಣ್ಣಪುಟ್ಟ ಸಮಸ್ಯೆಗಳನ್ನು ಗುರುತಿಸಿ, ಅವುಗಳ ಪರಿಹಾರಕ್ಕಾಗಿ ನಿರಂತರವಾಗಿ ಶ್ರಮಿಸಬೇಕು. ಸಹಕಾರ ಮನೋಭಾವ, ಸೇವಾ ಮನೋಭಾವ, ಸಮಸ್ಯೆಗಳನ್ನು ಆಲಿಸಿ ಪರಿಹಾರ ಕಂಡುಕೊಳ್ಳುವ ಸಾಮರ್ಥ್ಯ ಹಾಗೂ ಎಲ್ಲರನ್ನು ಒಗ್ಗೂಡಿಸಿಕೊಂಡು ಮುನ್ನಡೆಯುವ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು. ಮಹಿಳೆಯರು ಸ್ವಸಹಾಯ ಸಂಘಗಳ ಮೂಲಕ ಆರ್ಥಿಕವಾಗಿ ಸಬಲರಾಗುತ್ತಿರುವುದು ಉತ್ತಮ ಬೆಳವಣಿಗೆ. ಆದರೆ ಆರ್ಥಿಕ ಸಬಲೀಕರಣದ ಜೊತೆಗೆ ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿಯೂ ಮುನ್ನಡೆಯುವುದು ಅಗತ್ಯ. ಮಹಿಳೆಯರು ಯಾವುದೇ ಕಾರಣಕ್ಕೂ ಹಿಂಜರಿಯದೆ ಎಲ್ಲಾ ಕ್ಷೇತ್ರಗಳಲ್ಲಿ ನಾಯಕತ್ವ ವಹಿಸಬೇಕು ಎಂದರು. ತಮ್ಮ ಕುಟುಂಬವನ್ನು ಸಮರ್ಥವಾಗಿ ನಿರ್ವಹಿಸುವುದರ ಜೊತೆಗೆ ಸಮುದಾಯದ ಜವಾಬ್ದಾರಿಯನ್ನೂ ಮಹಿಳೆಯರು ವಹಿಸಿಕೊಳ್ಳಬೇಕು. ಗ್ರಾಮಗಳಲ್ಲಿನ ಒಂದೊಂದು ಸಮಸ್ಯೆಯನ್ನು ಕೈಗೆತ್ತಿಕೊಂಡು ಪರಿಹರಿಸುವ ಮೂಲಕ ಜನರ ವಿಶ್ವಾಸ ಗಳಿಸಬೇಕು. ಉತ್ತಮ ನಾಯಕರನ್ನು ಗುರುತಿಸಿ ಅವರಿಗೆ ಸಹಕಾರ ನೀಡುವುದರ ಜೊತೆಗೆ, ತಾವೂ ಉತ್ತಮ ನಾಯಕರಾಗಿ ಬೆಳೆಯುವ ಸಂಕಲ್ಪ ಮಾಡಬೇಕು. ?ಸಂಘಟನೆಯಲ್ಲಿ ಬಲವಿದೆ? ಎಂಬುದನ್ನು ಅರಿತು ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಗ್ರಾಮಗಳ ಅಭಿವೃದ್ಧಿಗೆ ಹೊಸ ದಿಕ್ಕು ನೀಡಬಹುದು ಎಂದು ಫಾದರ್ ವಿಕ್ಟರ್ ವಾಸ್ ಹೇಳಿದರು. ಮಹಿಳೆಯರು ಕೇವಲ ಸಮಸ್ಯೆಗಳನ್ನು ಚರ್ಚಿಸುವವರಾಗದೆ, ಸಮಸ್ಯೆಗಳಿಗೆ ಪರಿಹಾರ ಹುಡುಕುವವರಾಗಬೇಕು. ಗ್ರಾಮಗಳ ಏಳಿಗೆಗಾಗಿ ಜವಾಬ್ದಾರಿ ಹೊತ್ತು ಮುನ್ನಡೆಯುವ ನಾಯಕತ್ವ ಗುಣಗಳನ್ನು ತಮ್ಮಲ್ಲಿ ಬೆಳೆಸಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು. ಕಾರ್ಯಾಗಾರದಲ್ಲಿ ಸಂಸ್ಥೆಯ ಸಿಬ್ಬಂದಿಗಳಾದ ಸಿಸ್ಟರ್ ಸೋನಿಯಾ, ನಿರ್ಮಲಾ, ಸಿಸ್ಟರ್ ಯಡನ, ಸವಿತಾ, ಅಮಿತಾ, ರೀಟಾ, ಸುಜಾತ, ಪ್ರಭು ಹಾಗೂ ರೋಜ್‌ಮೆರಿ ಸೇರಿದಂತೆ 40 ಪ್ರತಿನಿಧಿಗಳು ಉಪಸ್ಥಿತರಿದ್ದರು.

August 20, 2026 | Page No: 4 | vishwadarshannews.com
Powered By KHUSHIHOST ® | License - ePaperCloud.com

ಸಂಯುಕ್ತ ಕರ್ನಾಟಕ

## ಗ್ರಾಮೀಣ ಪ್ರಗತಿಯೇ ದೇಶದ ಅಭಿವೃದ್ಧಿ

ಸಂ.ಕ.ಸಮಾಚಾರ ಹುಮ್ನಾಬಾದ್ : ದೇಶದ ಸರ್ವಾಂಗೀಣ ಅಭಿವೃದ್ಧಿ ಗ್ರಾಮೀಣ ಪ್ರದೇಶದ ಅಭಿವೃದ್ಧಿಯನ್ನೇ ಅವಲಂಬಿಸಿದೆ. ಈ ನಿಟ್ಟಿನಲ್ಲಿ ಗ್ರಾಮೀಣ ಭಾಗದಲ್ಲಿರುವ ಜನತೆಗೆ ಮೂಲಸೌಲಭ್ಯ ಕಲ್ಪಿಸಿ, ನೆಮ್ಮದಿ ಜೀವನ ಸಾಗಿಸಲು ಪೂರಕ ವಾತಾವರಣ ನಿರ್ಮಿಸುವ ಜವಾಬ್ದಾರಿ ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳನ್ನು ಅವಲಂಬಿಸಿದೆ. ಈ ನಿಟ್ಟಿನಲ್ಲಿ ಗ್ರಾಮೀಣ ಭಾಗದ ಮಹಿಳೆಯರು ಈ ವಿಷಯದಲ್ಲಿ ಹೆಚ್ಚಿನ ಆಸಕ್ತಿ ವಹಿಸಬೇಕು ಎಂದು ಆರ್ಬಿಟ್ ಸಂಸ್ಥೆ ನಿರ್ದೇಶಕ ಫಾದರ್ ವಿಕ್ಟರ್ ವಾಸ್ ಸಲಹೆ ನೀಡಿದರು.

ನಗರದ ಆರ್ಬಿಟ್ ಸಂಸ್ಥೆಯಲ್ಲಿ ಗ್ರಾಮೀಣ ಮಹಿಳೆಯರಿಗಾಗಿ ಆಯೋಜಿಸಿದ್ದ ನಾಯಕತ್ವ ಕುರಿತ ವಿಶೇಷ ತರಬೇತಿ ಕಾರ್ಯಾಗಾರ ಉದ್ಘಾಟಿಸಿ, ಮಾತನಾಡಿ ಗ್ರಾಮೀಣ ಭಾಗದಲ್ಲಿ ಕೈಗೊಳ್ಳಬಹುದಾದ ವಿವಿಧ ಜನೋಪಯೋಗಿ ಯೋಜನೆಗಳ ಅನುಷ್ಠಾನ ಕುರಿತು ವಿಸ್ತೃತ ಮಾರ್ಗದರ್ಶನ ನೀಡಿ, ಬರುವ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಎಷ್ಟು ಜನ ಸ್ಪರ್ಧಿಸಲು ನಿರ್ಧರಿಸಿದ್ದರಿ ಎನ್ನುವ ಪ್ರಶ್ನೆಗೆ ನಿರೀಕ್ಷಿತ ಪ್ರಮಾಣದ ಆಸಕ್ತಿ ತೋರದವರಿಗೆ ಚುನಾವಣೆ ಸ್ಪರ್ಧಿಸುವುದರಿಂದ ಆಗುವ ವಿವಿಧ ಲಾಭ, ಸ್ಥಾನಮಾನಗಳ ಕುರಿತಂತೆ ತಿಳವಳಿಕೆ ನೀಡಿದರು.

ಸಂಸ್ಥೆ ವ್ಯವಸ್ಥಾಪಕಿ ಸಿಸ್ಟರ್ ಸೋನಿಯಾ, ಮಹಿಳಾ ಸಬಲೀಕರಣ ಯೋಜನೆ ಸಂಯೋಜಕಿ ನಿರ್ಮಲಾ, ಕಾರ್ಯರ್ತೆಯರಾದ ಸವಿತಾ, ರೀಟಾ, ಅಮಿತಾ, ರೋಸದ್, ಮೇರಿ, ಸುಜಾತಾ, ಸ್ಥಳೀಯ ಸಂಯೋಜಕರಾದ ಸಿಸ್ಟರ್ ಯಡನ್, ಪ್ರಭು, ಅಮೀತ ಮೊದಲಾದವರಿದ್ದರು.




ಹುಮನಾಬಾದ್: ಆರ್ಬಿಟ್ ಸಂಸ್ಥೆಯಲ್ಲಿ ಗ್ರಾಮೀಣ ಮಹಿಳೆಯರಿಗೊಸ್ಕರ ಆಯೋಜಿಸಿದ್ದ ನಾಯಕತ್ವ ಕುರಿತ ವಿಶೇಷ ತರಬೇತಿ ಕಾರ್ಯಾಗಾರವನ್ನು ಆರ್ಬಿಟ್ ಸಂಸ್ಥೆ ನಿರ್ದೇಶಕ ಫಾದರ್ ವಿಕ್ಟರ್ ವಾಸ್ ಉದ್ಘಾಟಿಸಿದರು.

# ಸೇವಾವಾಣಿ

## ಸೇವಾ ಸಂಗಮ ಸಂಸ್ಥೆ, ಕಲಬುರಗಿ




ನಮ್ಮ ತಂಡ • ನಮ್ಮ ಸೇವೆ • ನಮ್ಮ ಬದಲಾವಣೆ

**“ಜನರೊಂದಿಗೆ, ಜನರಿಗಾಗಿ ಸಮಾಜದ ಒಳಿತಿಗಾಗಿ ನಿರಂತರ ಸೇವೆ.”**

**ಮಾಸಿಕ ಸುದ್ದಿಪತ್ರಿಕೆ | ಆಗಸ್ಟ್ 2026**

24 ಆಗಸ್ಟ್ 2026ರಂದು ಕಲಬುರಗಿ ನಗರದ ಸೇಂಟ್ ಮೇರಿ ಚರ್ಚ್‌ನ ಮದರ್ ತೆರೇಸಾ ಸಭಾಂಗಣದಲ್ಲಿ, ಮದರ್ ತೆರೇಸಾ ಚಾರಿಟಬಲ್ ಟ್ರಸ್ಟ್ ಎಸ್.ಸಿ.ಎನ್. ಸಿಸ್ಟರ್ಸ್ ಹಾಗೂ ಸೇವಾಸಂಗಮ ಸಂಸ್ಥೆಯ ಸಹಯೋಗದಲ್ಲಿ, ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯಡಿ ಪೌಷ್ಟಿಕ ಆಹಾರ ವಿತರಣೆ ಕಾರ್ಯಕ್ರಮ ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ 150 ಮಕ್ಕಳಿಗೆ ಪೌಷ್ಟಿಕ ಆಹಾರ ವಿತರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಫಾದರ್ ಪ್ರವೀಣ್ ಜೋಸೆಫ್ ವಹಿಸಿದ್ದರು. ಅವರು ಮಕ್ಕಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಪೌಷ್ಟಿಕ ಆಹಾರದ ಮಹತ್ವವನ್ನು ವಿವರಿಸಿ, ಮಕ್ಕಳಿಗೆ ಪ್ರತಿದಿನ ಪೌಷ್ಟಿಕ ಆಹಾರ ನೀಡುವಂತೆ ಪಾಲಕರಿಗೆ ತಿಳಿಸಿದರು. ಫಾದರ್ ಅನಿಲ್ ಕ್ರಾಸ್ತಾ ಅವರು ಬೆಳವಣಿಗೆಯಲ್ಲಿ ಕುಂಠಿತತೆ ಹೊಂದಿರುವ ಮಕ್ಕಳಿಗೆ ಉತ್ತೇಜಕ ಚಟುವಟಿಕೆಗಳ ಜೊತೆಗೆ ಪೌಷ್ಟಿಕ ಆಹಾರ ಒದಗಿಸುವುದೂ ಮಹತ್ವದ ಸಮಾಜ ಸೇವೆಯಾಗಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸೇವಾಸಂಗಮ ಸಂಸ್ಥೆಯ ಸಹನಿರ್ದೇಶಕರಾದ ಫಾದರ್ ಅಲ್ಬರ್ಟ್, ಎರಡೂ ಸಂಸ್ಥೆಗಳ ಸಂಯೋಜಕರು, ಕಾರ್ಯಕರ್ತರು, 50 ವಿಕಲಚೇತನ ಮಕ್ಕಳು ಹಾಗೂ ಅವರ ಪಾಲಕರು ಭಾಗವಹಿಸಿದರು.






## Nutrition for Growth, Strength for Life

06 ಆಗಸ್ಟ್ 2026ರಂದು ಕಲಬುರಗಿ ತಾಲೂಕಿನ ಭೀಮಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ, ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮ್‌ಜಿ ಫೌಂಡೇಶನ್ ಸಹಯೋಗದಲ್ಲಿ, ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯಡಿ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ 0-8 ವರ್ಷದೊಳಗಿನ ಮಕ್ಕಳಲ್ಲಿ ಕಂಡುಬರುವ ಬೆಳವಣಿಗೆಯ ನ್ಯೂನತೆಗಳನ್ನು ಶೀಘ್ರವಾಗಿ ಗುರುತಿಸಿ, ಸೂಕ್ತ ಆರಂಭಿಕ ಹಸ್ತಕ್ಷೇಪ ನೀಡುವ ಮಹತ್ವದ ಕುರಿತು ಮಾಹಿತಿ ನೀಡಲಾಯಿತು. ಮಗು ತಡವಾಗಿ ಕೂರುವುದು, ನಿಲ್ಲುವುದು ಅಥವಾ ನಡೆಯುವುದು ಮುಂತಾದ ಬೆಳವಣಿಗೆಯ ವಿಳಂಬದ ಲಕ್ಷಣಗಳನ್ನು ಹೊಂದಿದ್ದರೆ, ಸೂಕ್ತ ಚಟುವಟಿಕೆಗಳ ಮೂಲಕ ಮಗುವಿನ ಸಾಮರ್ಥ್ಯವನ್ನು ಹೆಚ್ಚಿಸಬಹುದು ಎಂದು ವಿವರಿಸಿದರು.



21 ಆಗಸ್ಟ್ 2026ರಂದು ಕಲಬುರಗಿ ತಾಲೂಕಿನ ಮೇಳಕುಂದ ಗ್ರಾಮದ ಅಂಗನವಾಡಿಯಲ್ಲಿ, ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮ್‌ಜಿ ಫೌಂಡೇಶನ್ ಸಹಯೋಗದಲ್ಲಿ, ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯಡಿ ಬೇಬಿ ಸ್ಕ್ರೀನಿಂಗ್ ಕಾರ್ಯಕ್ರಮ ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಬೆಳವಣಿಗೆಯಲ್ಲಿ ಕುಂಠಿತತೆ ಹೊಂದಿರುವ 15 ಮಕ್ಕಳನ್ನು ತಪಾಸಣೆ ಮಾಡಲಾಯಿತು. ಮಕ್ಕಳ ದೈಹಿಕ ಬೆಳವಣಿಗೆಯನ್ನು ಪರಿಶೀಲಿಸಲು ದೇಹದ ವಿವಿಧ ಸುತ್ತಳತೆಗಳನ್ನು ಅಳೆಯುವುದರ ಜೊತೆಗೆ ಅಗತ್ಯ ಮಾಹಿತಿಯನ್ನು ದಾಖಲಿಸಲಾಯಿತು. ತಪಾಸಣೆಯ ಮೂಲಕ ಬೆಳವಣಿಗೆ ನ್ಯೂನತೆಗಳನ್ನು ಆರಂಭಿಕ ಹಂತದಲ್ಲಿಯೇ ಗುರುತಿಸಿ, ಅಗತ್ಯವಿರುವ ಮಕ್ಕಳಿಗೆ ಸೂಕ್ತ ಆರಂಭಿಕ ಹಸ್ತಕ್ಷೇಪ ಹಾಗೂ ಮಾರ್ಗದರ್ಶನ ನೀಡಲು ಸಹಕಾರಿಯಾಯಿತು.

**EARLY DETECTION TODAY, BETTER DEVELOPMENT TOMORROW.**

05 ಆಗಸ್ಟ್ 2026ರಂದು ಕಲಬುರಗಿ ನಗರದ ವಡ್ಡರಗಲ್ಲಿ ಪ್ರದೇಶದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ, ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮ್‌ಜಿ ಫೌಂಡೇಶನ್ ಸಹಯೋಗದಲ್ಲಿ, ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯಡಿ ಮಕ್ಕಳಲ್ಲಿ ಕಂಡುಬರುವ ಬೆಳವಣಿಗೆ ಕುಂಠಿತತೆ ಕುರಿತು ಅರಿವು ಕಾರ್ಯಕ್ರಮ ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಬೆಳವಣಿಗೆ ಕುಂಠಿತತೆಯ ವಿಧಗಳು, ಲಕ್ಷಣಗಳು ಹಾಗೂ ಮಕ್ಕಳನ್ನು ಶೀಘ್ರವಾಗಿ ಗುರುತಿಸುವ ವಿಧಾನಗಳ ಕುರಿತು ಮಾಹಿತಿ ನೀಡಲಾಯಿತು. ಗುರುತಿಸಲ್ಪಟ್ಟ ಮಕ್ಕಳಿಗೆ ನೀಡುವ ವಿವಿಧ ಚಟುವಟಿಕೆಗಳು, ಆರಂಭಿಕ ಹಸ್ತಕ್ಷೇಪದಿಂದ ಉಂಟಾಗುವ ಸಕಾರಾತ್ಮಕ ಬದಲಾವಣೆಗಳು ಹಾಗೂ ಸರ್ಕಾರದ ಸೌಲಭ್ಯಗಳ ಕುರಿತು ವಿವರಿಸಿದರು.





22 ಆಗಸ್ಟ್ 2026ರಂದು ಕಲಬುರಗಿ ನಗರದ ಪ್ರಶಾಂತ್ ನಗರ ಅಂಗನವಾಡಿಯಲ್ಲಿ, ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮ್‌ಜಿ ಫೌಂಡೇಶನ್ ಸಹಯೋಗದಲ್ಲಿ ಮಕ್ಕಳ ಬೆಳವಣಿಗೆ ಕುಂಠಿತತೆ ಕುರಿತು ಅರಿವು ಕಾರ್ಯಕ್ರಮ ಆಯೋಜಿಸಲಾಯಿತು. 0–8 ವರ್ಷದ ಮಕ್ಕಳ ಬೆಳವಣಿಗೆಯ ಹಂತಗಳು ಹಾಗೂ ಬೆಳವಣಿಗೆಯ ವಿಳಂಬವನ್ನು ಆರಂಭಿಕ ಹಂತದಲ್ಲಿಯೇ ಗುರುತಿಸುವ ಕುರಿತು ಶ್ರೀಮತಿ ಮಂಜುಳಾ ಅವರು ಮಾಹಿತಿ ನೀಡಿದರು. ಸೂಕ್ತ ಉತ್ತೇಜಕ ಚಟುವಟಿಕೆಗಳು ಮತ್ತು ಆರಂಭಿಕ ಹಸ್ತಕ್ಷೇಪದಿಂದ ಮಕ್ಕಳ ಬೆಳವಣಿಗೆಯಲ್ಲಿ ಸುಧಾರಣೆ ತರಬಹುದು ಎಂದು ತಿಳಿಸಿದರು. 8 ಮಹಿಳೆಯರು ಹಾಗೂ ಅಂಗನವಾಡಿ ಸಹಾಯಕಿ ಭಾಗವಹಿಸಿದರು.

27 ಆಗಸ್ಟ್ 2026ರಂದು ಕಲಬುರಗಿ ನಗರದ ಯದುಲಾ ಕಾಲೋನಿ ಅಂಗನವಾಡಿ ಕೇಂದ್ರ-1ರಲ್ಲಿ, ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮ್‌ಜಿ ಫೌಂಡೇಶನ್ ಸಹಯೋಗದಲ್ಲಿ ಬೆಳವಣಿಗೆ ಕುಂಠಿತತೆ ಹೊಂದಿರುವ ಮಕ್ಕಳ ಕುರಿತು ಅರಿವು ಕಾರ್ಯಕ್ರಮ ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಸೇವಾಸಂಗಮ ಸಂಸ್ಥೆಯ ಕುಮಾರಿ ಅನಿತಾ ಅವರು 0–8 ವರ್ಷದ ಮಕ್ಕಳ ಬೆಳವಣಿಗೆಯ ಹಂತಗಳು, ಉತ್ತೇಜಕ ಚಟುವಟಿಕೆಗಳ ಮಹತ್ವ ಹಾಗೂ ಆರಂಭಿಕ ಹಸ್ತಕ್ಷೇಪದ ಕುರಿತು ಮಾಹಿತಿ ನೀಡಿದರು. ಮಕ್ಕಳನ್ನು ನಿಯಮಿತವಾಗಿ ಕೇಂದ್ರಕ್ಕೆ ಕರೆತಂದು ವಿವಿಧ ದೈಹಿಕ ಹಾಗೂ ಉತ್ತೇಜಕ ಚಟುವಟಿಕೆಗಳಲ್ಲಿ ತೊಡಗಿಸುವುದರಿಂದ ಅವರ ಬೆಳವಣಿಗೆಯಲ್ಲಿ ಉತ್ತಮ ಬದಲಾವಣೆ ತರಬಹುದು ಎಂದು ತಿಳಿಸಿದರು.





27 ಆಗಸ್ಟ್ 2026ರಂದು ಕಲಬುರಗಿ ನಗರದ ಆಶ್ರಯ ಕಾಲೋನಿ ಅಂಗನವಾಡಿ ಕೇಂದ್ರದಲ್ಲಿ, ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯಡಿ ಬೆಳವಣಿಗೆಯಲ್ಲಿ ಕುಂಠಿತತೆ ಹೊಂದಿರುವ ಮಕ್ಕಳನ್ನು ಶೀಘ್ರವಾಗಿ ಗುರುತಿಸುವ ಕುರಿತು ಅರಿವು ಕಾರ್ಯಕ್ರಮ ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ 0–7 ವರ್ಷದ ಮಕ್ಕಳ ಪ್ರಮುಖ ಬೆಳವಣಿಗೆಯ ಹಂತಗಳು ಹಾಗೂ ಅವುಗಳಲ್ಲಿ ವಿಳಂಬ ಕಂಡುಬಂದಲ್ಲಿ ಗುರುತಿಸುವ ವಿಧಾನಗಳ ಕುರಿತು ಶ್ರೀಮತಿ ಶಂಕರಮ್ಮ ಅವರು ಮಾಹಿತಿ ನೀಡಿದರು. ಆರಂಭಿಕ ಹಂತದಲ್ಲಿಯೇ ಬೆಳವಣಿಗೆಯ ವಿಳಂಬವನ್ನು ಗುರುತಿಸಿ, ಅಗತ್ಯವಿರುವ ಮಕ್ಕಳಿಗೆ ಸೂಕ್ತ ಆರಂಭಿಕ ಹಸ್ತಕ್ಷೇಪ ಹಾಗೂ ಉತ್ತೇಜಕ ಚಟುವಟಿಕೆಗಳನ್ನು ನೀಡುವುದರಿಂದ ಉತ್ತಮ ಬೆಳವಣಿಗೆಗೆ ಸಹಕಾರಿಯಾಗುತ್ತದೆ ಎಂದು ತಿಳಿಸಲಾಯಿತು.

**RECOGNIZE EARLY, ACT EARLY, TRANSFORM LIVES**

22 ಆಗಸ್ಟ್ 2026ರಂದು ಕಲಬುರಗಿ ಜಿಲ್ಲೆಯ ಸಣ್ಣೂರು ಗ್ರಾಮದ ಮಾತಾ ಮಾಣಿಕೇಶ್ವರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ, ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯಡಿ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಬೆಳವಣಿಗೆಯಲ್ಲಿ ಕುಂಠಿತತೆ ಹೊಂದಿರುವ ಮಕ್ಕಳ ಕುರಿತು ಅರಿವು ಕಾರ್ಯಕ್ರಮ ಆಯೋಜಿಸಲಾಯಿತು. ಯೋಜನೆಯ ಕಾರ್ಯಕರ್ತೆ ಶ್ರೀಮತಿ ದಾಕ್ಷಾಯಿಣಿ ಅವರು 0–8 ವರ್ಷದ ಮಕ್ಕಳ ಪ್ರಮುಖ ಬೆಳವಣಿಗೆಯ ಹಂತಗಳು ಹಾಗೂ ಅವುಗಳಲ್ಲಿ ವಿಳಂಬವನ್ನು ಗುರುತಿಸುವ ಕುರಿತು ಮಾಹಿತಿ ನೀಡಿದರು. ಕತ್ತು ನಿಲ್ಲಿಸುವುದು, ಕುಳಿತುಕೊಳ್ಳುವುದು, ಮಾತನಾಡುವುದು ಹಾಗೂ ಸಾಮಾಜಿಕವಾಗಿ ಬೆರೆಯುವುದು ಮುಂತಾದ ಬೆಳವಣಿಗೆಯ ಹಂತಗಳು ವಯಸ್ಸಿಗೆ ಅನುಗುಣವಾಗಿ ಕಂಡುಬರದಿದ್ದರೆ, ಆರಂಭಿಕ ಹಂತದಲ್ಲಿಯೇ ಗುರುತಿಸಿ ಸೂಕ್ತ ಉತ್ತೇಜಕ ಚಟುವಟಿಕೆಗಳನ್ನು ನೀಡುವ ಮಹತ್ವವನ್ನು ವಿವರಿಸಲಾಯಿತು.




OUR WORK.
OUR IMPACT.
OUR RESULTS.

Serving with compassion. Empowering with purpose.
Creating lasting change.

www.orbitbidar.in / sevasangama.in

# ORBIT NGO

Non-Governmental Organization
Humnaabad, Karnataka

Organization of Bidar Integral Transformation



*Together, we can*

# CREATE A BETTER TOMORROW



Your support helps us **empower lives**, **build communities** & bring hope.

**SCAN THIS QR CODE**

# TO DONATE

- **EMPOWER LIVES**
- **BUILD COMMUNITIES**
- **SUPPORT EDUCATION**
- **CREATE HOPE**

*Your Small Act Can Make a Big Difference*

Visit Our Website
**www.orbitbidar.in**

## OUR MISSION

To bring positive and integral transformation in communities through education, empowerment, and sustainable development.

Humnaabad, Bidar District
Karnataka, India

Contact Us
8880843038

# SEVA SANGAMA

Organization for Social Concern Development



## Scan this QR Code

# TO DONATE



**TOGETHER WE CAN**

- SUPPORT EDUCATION
- EMPOWER COMMUNITIES
- IMPROVE LIVELIHOODS
- BUILD A BETTER SOCIETY

Your Support Creates a Better Tomorrow

Visit Our Website
**www.sevasangama.in**

**“ Small Act. Big Impact.**
Be the reason someone smiles today.

Together for Compassion
Together for Change
Together for a Better Future

Contact Us
8971119914

Follow Us

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ
# ಧರ್ಮಕ್ಷೇತ್ರ ಗುಲ್ಬರ್ಗಾ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುನರ್ವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಫೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೆವೆ. ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.



— TO —

## DONATE, SCAN THE QR CODE

SCAN & DONATE

**ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.**

**ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.**

**ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್ ಪ್ರತಿ ತಿಂಗಳು 4000/- ವರ್ಷಕ್ಕೆ 40,000/-**

**ಪ್ರಾಯೋಜಕರು ಒಂದು ಮಗು ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/-**

**ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.**

(Only for Indian Citizens)

### Bank Account Details

DONATE

| | | |
|---|---|---|
| Name | : | Sevasangama Development Society |
| Account No | : | 16040100022902 |
| IFSC Code | : | FDRL0001604 |
| Bank | : | Federal Bank |
| Branch | : | Super Market Kalaburagi |


**Address**

Seva Sangama Development Society,
Near Kendriya Vidyalaya,
Kotnoor D, Kalaburagi, Karnataka-585102

**Contact**
8660968063
9743112739

**Email**
sevasangama2006@gmail.com

*Fr. Victor Anil Vas*
Director, Seva Sangama & ORBIT


Visit Us: **www.sevasangama.in**